ಸುಧಾರಧಾರಾ—3

ಮೋಹನ-ವಾಣಿ

ಸಾರಸ್ವತ

୨.୧୧.୨୦୦୨

ನನ್ನ ಹಿಂದೀ ಆಚಾರ್ಯರಾದ

ಪಂಡಿತ್

ಜಮುನಾಪ್ರಸಾದ ಶ್ರೀವಾಸ್ತವ

ಇವರ ಅಡಿದಾವರೆಗಳಲ್ಲಿ—

—'ಸಾರಸ್ವತ.'

ಮುನ್ನುಡಿ.

'ಮೋಹನ–ವಾಣಿ'ಯೆಂಬ ಪುಸ್ತಕವನ್ನು ಕರ್ನಾಟಕ ಮಾತೆಯ ಸುಪುತ್ರ
ಲ್ಲೊಬ್ಬರಾದ, ಜಿ. ಎನ್. ಭಿಡೆ, 'ರಾಷ್ಟ್ರಭಾಷಾ ವಿಶಾರದ' ಇವರು 'ಸಾರಸ್ವತ'
ಬ ಹೆಸರಿನಿಂದ ಬರೆದಿರುತ್ತಾರೆ. ಈ ಚಿಕ್ಕ ಪುಸ್ತಕವನ್ನು ಓದಿ ನೋಡಿದಲ್ಲಿ,
ಅನ್ನೊಳಗೊಂಡಿರುವ ಅಮೂಲ್ಯ ವಿಷಯುಗಳನ್ನು ಕಂಡು ಆಶ್ಚರ್ಯವಾಯಿತು;
ದರಲ್ಲಿರುವ ಪ್ರತಿಯೊಂದು ವಿಷಯವು ಮಹಾತ್ಮರನ್ನೂ ಮರುಳುಗೊಳಿಸುವಂತಹುದು!
ಥ ವಿಷಯುಗಳನ್ನಾರಿಸಿ, ಸಣ್ಣ ಮಕ್ಕಳಿಗೂ ಸುಬೋಧವಾಗುವಂತೆ ಸರಳ ಶೈಲಿ
ಲ್ಲಿ ಬರೆದು ಸಾರಸ್ವತರು ಹಿಂದೂಸಮಾಜಕ್ಕೆ ಬಹು ದೊಡ್ಡ ಉಪಕಾರವನ್ನು
ಾಡಿರುತ್ತಾರೆ.

ಇದರಲ್ಲಿ ಮುಖ್ಯ ವಿಷಯುಗಳು ಹಲವಿವೆ. ಲೇಖಕರು ಮೊದಲು ಗೀತೆಯ
ಷಯುವನ್ನೆತ್ತಿ ಭಗವತ್ಪ್ರಾರ್ಥನೆಯ ಮೂಲಕ ಭಾರತದ ಸ್ತ್ರೀ–ಪುರುಷರೆಲ್ಲರೂ
ತೆಯ ಅಭಯುವಚನಗಳನ್ನು ತಿಳಿದಿರಬೇಕೆಂಬುದನ್ನು ಪುಷ್ಟೀಕರಿಸಿದ್ದಾರೆ. ಭಾರತ
ರ್ಷದಲ್ಲಿರುವ ಜಾತಿವೈವಿಧ್ಯದಿಂದುಂಟಾದ ಅವ್ಯವಸ್ಥೆಯಿಂದ ಅಸ್ಪೃಶ್ಯರೆಂದು ದೂರೀ
ಸಲ್ಪಟ್ಟಿರುವ ಸೋದರರಲ್ಲಿ ಸಹಾನುಭೂತಿಯನ್ನು ತೋರಿಸಿ, ಆ ಕೀಳು ಅಭಿ
ರಾಯುವನ್ನು ತೊಲಗಿಸಲು ಪ್ರಯತ್ನಿಸುವರಲ್ಲದೆ, ಕುಲಕ್ರಮಾಗತವಾಗಿ ಬಂದಿರುವ
ೋಷಾಪದ್ಧತಿಯಿಂದ ದೇಶಕ್ಕೊದಗುವ ಹಾನಿಯನ್ನು ತಿಳಿದು, ಆ ವಿಷಯ
ನ್ನು ಕುರಿತು, ಸಾಕಷ್ಟು ವಿವರಿಸದಿದ್ದರೂ, ಅದರಿಂದ ಹಾನಿಯಲ್ಲದೆ–ಲಾಭವಿಲ್ಲ
ನ್ನುವುದನ್ನು ಸಾಕಷ್ಟು ತೋರಿಸಿರುವರು. ಮೂರ್ತಿಪೂಜೆಯ ವಿಚಾರದಲ್ಲಿಯೂ,
ನುಷ್ಯನು ತನ್ನ ಭಕ್ತಿ–ಶ್ರದ್ಧೆಗಳಿಗನುಸಾರವಾಗಿ, ಕಾಲ್ಪನಿಕ ಮೂರ್ತಿಪೂಜೆಯನ್ನು
ಾಡಿ, ಮನಸ್ಸನ್ನು ಸಂಯಮದಲ್ಲಿಟ್ಟುಕೊಳ್ಳಬೇಕೆಂಬುದನ್ನು ವಿವರಿಸಿ, ಮನುಷ್ಯನಿಗೆ
ಕ್ತಿಗಿಂತಲೂ ಶ್ರದ್ಧೆಯೇ ಮೇಲೆಂದು ಬಾಲಕನಾದ ಪ್ರಹ್ಲಾದನ ಉದಾಹರಣೆಯಿಂದ
ಿಸಿರುವರು.

ವೈವಾಹಿಕ ವಿಧಿ-ನಿಯಮಗಳನ್ನೆತ್ತಿ, ಈಗ ಹಿಂದೂಜಾತಿಯಲ್ಲಿ ಅದರಲ್ಲೂ
ತ್ತಮರೆನಿಸಿಕೊಳ್ಳುವ ಬ್ರಾಹ್ಮಣರಲ್ಲಿ ಬಾಲ್ಯವಿವಾಹಪದ್ಧತಿಯಿರುವುದರಿಂದ, ತತ್ಪರಿ
ಾಮವಾಗಿ ಬಾಲವಿಧವೆಯರ ಗೋಳು, ಧರ್ಮದ ಹೆಸರಲ್ಲಿ ನಡೆಯುತ್ತಿರುವ ನಾನಾ
ಧವಾದ ಅತ್ಯಾಚಾರಗಳೂ, ಅದರ ಪರಿಹಾರಕೋಸ್ಕರ ಪುನರ್ವಿವಾಹ ಪದ್ಧತಿಯೂ
ಾರಸ್ವತ'ರಿಂದ ಸಂದರ್ಭೋಚಿತವಾಗಿ ವಿವರಿಸಲ್ಪಟ್ಟಿದೆ. ಈ ಒಂದು ವಿಷಯವೇ
ಾಮಾಜಿಕ ಸೂತ್ರಧಾರರ ಕಣ್ತೆರೆಯುವುದರಲ್ಲಿ ಸಂದೇಹವಿಲ್ಲ.

ಅಹಿಂಸೆ! ಇದು ಮಹಾತ್ಮಾಜೀಯುವರ ಮುಖ್ಯ ತತ್ವವು. ಯಾವ ಕಾರಣ
ಂದಲೂ ಇತರರಿಗೆ, ಶಾರೀರಕ ಯಾ ಮಾನಸಿಕ ಹಿಂಸೆ ಮಾಡದಿರುವುದೇ ಅಹಿಂಸೆ!

ಇದನ್ನು ಸೂಕ್ಷ್ಮರೀತಿಯಿಂದ ವಿಚಾರಿಸಿ ನೋಡಿದರೆ ಪ್ರಶ್ನೆಯು ಬಹಳ ಗಂಭೀರವಾಗಿದೆ. ಅದನ್ನೆಲ್ಲರೂ ತಿಳಕೊಳ್ಳುವಂತೆ ಸುಲಭರೀತಿಯಿಂದ ಈ ಚಿಕ್ಕ ಪುಸ್ತಕದಲ್ಲಿ ಅಡಕವಾಗಿದೆ.

ಆರ್ಥಿಕ ವಿಚಾರವನ್ನು ತೆಗೆದುಕೊಂಡು ನಮ್ಮ ಭಾರತವನ್ನು ಆರ್ಥಿಕ ದುರವಸ್ಥೆಯಿಂದ ಉದ್ಧರಿಸಲು ಒಂದೇ ಒಂದು ಉಪಾಯವಾದ ಖಾದಿಯನ್ನೂ, ಅದರ ಮಹತ್ವವನ್ನೂ ವಿವರಿಸಿ ಬಟ್ಟೆಗಾಗಿ ನಮ್ಮ ದೇಶದಿಂದ ಪರದೇಶಕ್ಕೆ ಹೋಗುವ ದ್ರವ್ಯವನ್ನು ನಮ್ಮ ದೇಶದಲ್ಲೇ ಉಂಟಾದ ಖಾದಿಯನ್ನು ಉಡುವುದರಿಂದ ಉಳಿಸಿಕೊಂಡು ಬಡ ಜನರನ್ನು ಕಾಪಾಡುವ ಸುಲಭಮಾರ್ಗವನ್ನು ತೋರಿಸಿದ್ದಾರೆ.

ಕೊನೆಯದಾದ ಶ್ರಮಧರ್ಮದಲ್ಲಿ ಪ್ರತಿಯೊಬ್ಬ ಮಾನವನೂ ಶ್ರಮಜೀವಿಯಾಗಿರಬೇಕೆಂಬುದು ಮಾನವಕರ್ತವ್ಯವೆಂಬುದನ್ನು ಟಾಲ್‌ಸ್ಟಾಯರ ಉದಾಹರಣೆಯಿಂದ ತೋರಿಸಿರುವರು. 'ಕೂತುಂಬುವವನಿಗೆ ಕುಡಿಕೆ ಹಣ ಸಾಲದು' ಎಂಬ ಗಾದೆಯಂತೆ ಪಿತ್ರಾರ್ಜಿತವು ಬೇಕಾದಷ್ಟಿದ್ದರೂ ಮಗನು ಶ್ರಮಜೀವಿಯಲ್ಲದೆ ಸೋಮಾರಿಯಾಗಿದ್ದರೆ ಕೆಲವು ದಿನಗಳಲ್ಲೇ ಅವನು ಹೊಟ್ಟೆಗಿಲ್ಲದೆ ದುಃಖಕ್ಕೀಡಾಗುವುದರಲ್ಲಿ ಸಂಶಯವಿಲ್ಲವೆಂಬುದನ್ನು ಸಮರ್ಥಿಸಿರುವರು.

'ಸಾರಸ್ವತ'ರು ಮುಖ್ಯ ವಿಷಯಗಳನ್ನೇ ತೆಗೆದುಕೊಂಡು ಸುಲಭವಾದ ಭಾಷೆಯಲ್ಲಿ ಬರೆದು ತಮ್ಮ ಭಾಷಾಸೇವೆಯನ್ನು ಆದಷ್ಟುಮಟ್ಟಿಗೆ ಸಲ್ಲಿಸಿರುವರು! 'ಭಿನ್ನರುಚಿರ್ಹಿಲೋಕಃ' ಎಂಬಂತೆ ಭಿನ್ನಭಿನ್ನ ಕಾವ್ಯಗಳನ್ನು ಓದಿ ಸಂತೋಷಪಡುವವರೂ, ಅಂತಹ ಕಾವ್ಯಗಳನ್ನೇ ರಚಿಸುವವರೂ ಈ ಇಪ್ಪತ್ತನೆಯ ಶತಮಾನದಲ್ಲಿ ಬಹುಮಂದಿ ಇದ್ದಾರೆ. ಆದರೆ ಎಲ್ಲರಿಗೂ ಏಕರೀತಿಯಾಗಿ ಸಂತೋಷವನ್ನುಂಟುಮಾಡುವ, ಗುರುಶಿಷ್ಯ ಸಂಭಾಷಣಾರೂಪವಾದ ಈ ಗದ್ಯಗ್ರಂಥವು ಪಂಡಿತರಿಗೆ ಹೆಚ್ಚು ಮೋಹಕವಾಗದಿದ್ದರೂ ಲೋಕಾನುಭವವನ್ನು ಹೊಂದಿ ಸುಧಾರಕರಾಗಲಿಷ್ಟಪಡುವವರಿಗೆ ಮಾರ್ಗದರ್ಶಕವಾಗಿರುವುದು.

'ಅಳಿಲ ಭಕ್ತಿ ಮಳಲ ಸೇವೆ'ಯೆಂಬಂತೆ ಈ ಲೇಖಕರ ಸೇವೆಯು ಪ್ರಕೃತದ ವಾತಾವರಣದಲ್ಲಿ ಭಾಷಾಸೇವೆಯಲ್ಲಿ ಸೇರಿ ಬಹುಜನರನ್ನು ಸಂತೋಷಪಡಿಸುವುದಲ್ಲದೆ, ಮುಂದೆಯೂ ಇವರಿಂದ, ಇದಕ್ಕಿಂತಲೂ ಉತ್ತಮವಾದ ಗ್ರಂಥಗಳನ್ನು ಎದುರು ನೋಡುತ್ತಿರುವುದು ಸ್ವಾಭಾವಿಕವಾಗಿರುವುದೆಂದು ಧೈರ್ಯವಾಗಿ ಹೇಳಬಲ್ಲೆನು.

ಸುಧಾರಣಾ ದೃಷ್ಟಿಯಿಂದ ಇಂತಹ ಗ್ರಂಥಗಳು ಈ ಸಮಯದಲ್ಲಿ ಬಹಳ ಅವಶ್ಯಕವಾಗಿರುವುದರಿಂದ ಸುಧಾರಿತ ನಾಗರರು ಇದಕ್ಕೆ ಆಶ್ರಯವನ್ನಿತ್ತು ಪ್ರೋತ್ಸಾಹಿಸಿ ಲೇಖಕರ ಶ್ರಮವನ್ನು ಸಾರ್ಥಕಗೊಳಿಸುವುದಲ್ಲದೆ, ಅಸ್ತವ್ಯಸ್ತವಾದ ಹಿಂದೂ ಸಮಾಜದ ಸುಧಾರಣೆಗೆ ಸಹಾಯಕರಾಗುವರೆಂದು ನಂಬಿದ್ದೇನೆ.

ಪಿ. ಮಂದಾಕಿನೀ ಬಾಯಿ,

ರಾಷ್ಟ್ರಭಾಷಾವಿಶಾರದಾ, ಬೆಂಗಳೂರು.

ನನ್ನ ಮಾತು.

ಈ ಚಿಕ್ಕ ಬರವಣಿಗೆಗೆ ಹೆಸರೇನೋ 'ಮೋಹನ-ವಾಣಿ'ಯೆಂದಿಟ್ಟಿರುವುದು ನಿಜ. ರ 'ಮೋಹಕತೆ'ಯು ವಾಚಕರ ಬುದ್ಧಿಪಕ್ವತೆಯಿಂದ—ವಿಮರ್ಶಕರ ಸೂಕ್ಷ್ಮ ಷ್ಟಿಯಿಂದ ಮಾತ್ರ ಸಾರ್ಥಕವಾಗಬಲ್ಲದು. ಇದು ಕೇವಲ ಹೊರಗಿನ ಉಪಚಾರ ವೇ ನನ್ನ ತಿಳುವು.

ಈ ಚಿಕ್ಕ ಪುಸ್ತಕವು ನನ್ನ ಕೈಗಾರಿಕೆಯಲ್ಲ. ಪೂಜ್ಯ ಮಹಾತ್ಮರ ತತ್ವಗಳು,—ಕೆಲ ಮ್ಮೆ ನನ್ನ ಹೃದಯದೊಳಗಿನ ಭಾವನಾಚಕ್ರದಲ್ಲಿ ಸಿಲುಕಿ, ಆಯ್ದು ತೆಗೆದ- ಕ್ತಿಕಗಳು ಮಾತ್ರ. ಅದನ್ನೇ ನಾನು ನನ್ನ ದೊರಗು—ಒರಟಾದ ದಾರದಂತಿರುವ ಷೆಯಲ್ಲಿ ಪೋಣಿಸಿರುವೆನು.

ನನ್ನ ಭಾಷೆಯನ್ನು ಭಾಷಾದೃಷ್ಟಿಯಿಂದ 'ಭಾಷೆ'ಯೆನ್ನುವಂತಿಲ್ಲ. ಕಾರಣ, ರಿ—ತಡವರಿಸಿ ಉಚ್ಚರಿಸುವ ಬಾಲಕನ ತೊದಲ್ನುಡಿಗಳಂತಿರುವುದು ನನ್ನ ಈ ಷೆ.

ನನ್ನ ಈ ಬರವಣಿಗೆಯ 'ಮುನ್ನುಡಿ'ಯನ್ನು ಬರೆದ ಅಕ್ಕಂದಿರಿಗೆ ನಾನ್ಯಾವ ೃಣೆ—ಕಾಣಿಕೆಯನ್ನೂ ಕೊಡುವಂತಿಲ್ಲ. ಕಾರಣ ನನ್ನದೇನುಂಟು? ತನ್ನನ್ನೇ ್ಕನವನಾಗಿರುವಾಗ ಅವನಿಗ್ಯಾವುದರ ಅಧಿಕಾರ? ಇರಲಿ.

ಇಲ್ಲಿ 'ಸಮರ್ಪಣ'ದ ಆಡಂಬರವನ್ನು ಮಾಡಿದುದೂ ನನ್ನ ಅಪರಾಧವೆನ್ನ ಸುದು. ಆದರೆ, ಇದು ನನ್ನ ಅಪರಾಧವಲ್ಲ. ಅದು ನನ್ನಲ್ಲಿ 'ನನಗೆ—ಸಮ ಣ—ಮಾಡುವುದೆಂದರೆ ನನ್ನನ್ನು ತಮಾಷೆ ಮಾಡುವಂತೆಯೇ ಸರಿ!' ಎಂದು ಹೇಳಿ ್ಚರಿಸಿದ ನಮ್ಮ ಜಮುನಾ ಪ್ರಸಾದರದೇ ಆಗಿದೆಯೆಂದರೆ,—ತಪ್ಪಾಗದು.

ಇನ್ನು, ವಾಚಕರಿಗೆ, ನನ್ನೀ ಚಿಕ್ಕ ಬರವಣಿಗೆಯನ್ನು, ಮಮತೆಯಿಂದೋದಿ, ಭಿಮಾನದಿಂದ ಪ್ರೋತ್ಸಾಹವೀಯುವ ಚಿಕ್ಕ, ದೊಡ್ಡ, ಬಂಧು-ಭಗಿನಿಯರಿಗೆ, ಂಧಾರಧಾರೆಯನ್ನಾಧರಿಸುವ ಮನವುಳ್ಳ ಗೆಳೆಯರಿಗೆ, ಅವರಿಗೆ ಸುಬುದ್ಧಿಯನ್ನು ಾಡುವ ಪರಮಪಿತನಿಗೆ ಅಡಿಗೆರಗಿ, ರಜೆ ಪಡೆಯುವೆನು.

'ಸಾರಸ್ವತ.'

ಮೋಹನ-ವಾಣಿ.

ರ
ಒಂದು ದಿನ ಮಧ್ಯಾಹ್ನ ಊಟವಾದ ನ ನು-
ಮೋಹನ-ಗೋಪಾಲರಿಬ್ಬರು ಮನೆಯ ರೀರ
ಖಾನೆಯಲ್ಲಿ ಕುಳಿತಿದ್ದರು. ಮೋಹನ- ಶ್ವರನ
ಲರು ಪರಸ್ಪರ ಗುರು-ಶಿಷ್ಯರು. ಗೊ ವುದಿಲ್ಲ.
ಸನಾತನ ಧರ್ಮವನ್ನು ಅಕ್ಕರೆಯಿಂದ ೀ ಅವ
ವನಾಗಿದ್ದರೂ, ಧರ್ಮದ ಹೆಸರಲ್ಲಿ ನಡೆಯುತ್ತಿರುವ ಅನ್ ಪದ್ಧತಿ
ಃಖಿತನಾಗಿ, ಸುಧಾರಣಾಪ್ರಿಯನಾಗಿದ್ದನು. ಹಲಕೆಲವ ಅವಮಾನಿಸಿ
ಳಾದ ನಂತರ ಗೋಪಾಲನು, ಗುರುವಾದ ಮೋಹನ ೀವರ ಬೆಳಕಿ
ಗುರುವರ! ನಾನು ತಮ್ಮೊಡನೆ ಕೆಲವು ಧಾರ್ಮಿಕ ಪ್ರಶ್ನೆ ಯುಗದಲ್ಲಿ
ೀಕೆಂದಿರುವೆನು' ಎಂದನು. ವಿಚಾರಸರಣಿ

ಮೋಹನನು, ನಸುನಗುತ್ತ 'ಅದಕ್ಕೇನಡ್ಡಿ? ಬೇ ಜ್ಯದ ಚಕ್ರವರ್ತಿ
ಾನು ಹೇಳುವುದು ಪಾಂಡಿತ್ಯದ ಬಲದಿಂದಲ್ಲ. ಕೇ
ಹಾಯದಿಂದ, ಎಂಬುದನ್ನು ನೀನೂ ಅರಿತಿರುವೆ' ನ ಹೆಸರಲ್ಲಿರುವ (!)

'ಚಿಂತಿಲ್ಲ, ನಿಮ್ಮ ವಾಣಿಯೇ ನನಗೆ ವೇ ರಣವೇನು?
ೋಪಾಲನು ಮೊದಲು ಶ್ರೀಮದ್ಭಗವದ್ಗೀತೆಯ ಲ್ಲಿಯೇ ಗೀತೆಯಂತಹ
್ರಶ್ನಿಸಿದನು:— ಳಿಗೆ ಅದು ಶುದ್ಧ ಮತ್ತು

ಗೋಪಾಲ:— ಶ್ರೀಮದ್ಭಗವದ್ಗೀತೆಯ ೇಳುವುದಾದರೆ, ಸಮಸ್ತ
ಕ್ತಿ-ಆದರಗಳು ಕಮ್ಮಿಯುವಲ್ಲ. ಆದರೆ, ೀಧಿಸುವ ಗ್ರಂಥವು 'ವಿಶ್ವ
ಂಬುದನ್ನು ನಾನು ಅರಿತಿಲ್ಲ. ಕಾರಣ, ಮುಗಳ, ಜಾತಿಭೇದಗಳನ್ನು
ೀತೆಯೆಂದರೆ ಕೇವಲ ಪರಂಜ್ಯೋತಿಸ್ವ ಯನ್ನುಪದೇಶಿಸುವ, ಇತರ
್ರೋಕ್ತವಾದುದರಿಂದ ವೇದಕ್ಕಿಂತಲೂ ಇ ತೋರಿಸುವ, ಜ್ಞಾನ-ಭಕ್ತಿ

ಆರ್ಯಸಮಾಜದವರು, ಗೀತೆಯೆಂದರೆ ಒಂದುಮಾರು ದೂರ ಸರಿಯುತ್ತಾರೆ. ಇತರ ಧರ್ಮೀಯರ ಕುರಿತು ಗೀತೆಯು ತೋರಿಸಿರುವ ಸಹಿಷ್ಣುತೆಯು ಪ್ರಶಂಸನೀಯವಾದರೂ ಅವರೇನೂ ಗೀತೆಯನ್ನು ಪ್ರೀತಿಸುವುದಿಲ್ಲ. ಆ ವಿಚಾರವೆಲ್ಲ ಶ್ರದ್ಧಾಧೀನವಾದುದರಿಂದ ಹಾಗಿರಲಿ. ಈಗ ನನ್ನನ್ನು ಬಾಧಿ ಸುತ್ತಿರುವ ಸಂದೇಹವು ಜಟಿಲವಾಗಿದೆ. 'ಗೀತೆಯು ಐತಿಹಾಸಿಕವೋ? ನೈತಿಹಾಸಿಕವೋ? ಗೀತೆಯು ಅನೈತಿಹಾಸಿಕವಾದರೆ, ಅದರಲ್ಲಿಯ ಪಾತ್ರ ಸತ್ಯತೆಯೆಂತು? ಮಹಾಭಾರತವೂ ಅನೈತಿಹಾಸಿಕವೆನ್ನಬೇಕಾಗುವುದ ?

ಮೋಹನ:—ಗೀತೆಯು ಐತಿಹಾಸಿಕವಲ್ಲ. ಇದರಲ್ಲಿಯ ಪಾತ್ರ ನನ್ನು ಗೀತಾಕಾರನು ಗೀತಾತತ್ವವು ಸುಲಭವಾಗಿ ಜನರಿಗೆ ತಿಳಿಯ ಐತಿಹಾಸಿಕವನ್ನಾಗಿ ಮಾಡಿದ್ದಾನೆ. ವಾಸ್ತವವಾಗಿ, ಭೌತಿಕ ಹೆಳೆಯಿಂದ ಮಾನವನ ಹೃದಯದೊಳಗೆ ನಿರಂತರವಾಗಿ ನಡಿ ದ್ವಂದ್ವಯುದ್ಧದ ವರ್ಣನವೇ ಗೀತೆಯ ಮುಖ್ಯ ವಿಷಯವು. ಆಧುನಿಕ ಅರ್ಥದಲ್ಲಿ ಮಹಾಭಾರತವನ್ನು ಸೇರಿಸಲಾಗು ಹಾಭಾರತದ ಆದಿಪರ್ವದಲ್ಲೇ ಇದರ ಪುಷ್ಟಪ್ರಮಾಣವಿದೆ. ತ್ತು ಅತಿಮಾನುಷೀ ಉತ್ಪತ್ತಿಗಳಿಂದ ಪಾತ್ರಗಳನ್ನು ರಚಿಸಿ, ಇತಿಹಾಸವನ್ನೇ ಮುಚ್ಚಿರುತ್ತಾನೆ. 'ಮಹಾಭಾರತ'ದ ಾಸಸಿದ್ಧವಲ್ಲವೆಂದಲ್ಲ; ಇರಬಹುದು. ಆದರೆ ಮಹಾ ೀಶವು ಧರ್ಮದ ಬೆಳಕಿನಿಂದ ಜನತೆಯ ಮಬ್ಬನ್ನು ಹೊರತು, ಕೌರವ—ಪಾಂಡವರ ಸಂಗ್ರಾಮ

ಗರೆ, 'ಮಹಾಭಾರತಕಾರ'ನು ಭೌತಿಕಯುದ್ಧವನ್ನು ಸ್ಕರಿಸಿದ್ದಾನೋ?

ರತಕಾರ'ನು ಭೌತಿಕ ಯುದ್ಧವನ್ನು ಸಮರ್ಥಿ ರ್ಕತೆಯನ್ನು ಸ್ಪಷ್ಟಪಡಿಸಿದ್ದಾನೆ. ಗೆದ್ದವನ ದ್ದಾನೆ. ಆತನನ್ನು ಪಶ್ಚಾತ್ತಾಪದ ಬೆಂಕಿ

ಲ್ಲಿ ನರಳಿಸಿದ್ದಾನೆ. ಹೆಚ್ಚೇಕೆ? ಗೆದ್ದವನ ಪಾಲಿಗೆ ದುಃಖದ ಹೊರತು ನ್ನೇನನ್ನೂ ಉಳಿಸಿರುವುದಿಲ್ಲ.

ಗೋ:—ಗೀತೆಯ ಕೃಷ್ಣನು ಸಂಪೂರ್ಣಾವತಾರ ಶ್ರೀಕೃಷ್ಣನೋ? ಲ್ಪನಿಕ ಕೃಷ್ಣನೋ? 'ಅವತಾರ'ವೆಂದರೇನು?

ವೋ:—ಗೀತೆಯ ಕೃಷ್ಣನು ಕಾಲ್ಪನಿಕನು. ಅವನನ್ನು ಅವತಾರ ರುಷನೆಂದರೆ ತಪ್ಪಾಗದು. ಸಂಪೂರ್ಣ ಶ್ರೀಕೃಷ್ಣನೂ ಕಾಲ್ಪನಿಕನು. ರಣ, ಅವತಾರವನ್ನಾರೋಪಿಸಿದುದು ಅವನ ಕಾಲಾನಂತರ. ಶರೀರ ಾರೀ ಪುರುಷ ವಿಶೇಷವೇ ಅವತಾರಿಯು. ಜೀವಮಾತ್ರವೂ ಈಶ್ವರನ ವತಾರವು. ಆದರೆ, ನಾವು ಲೌಕಿಕ ಭಾಷೆಯಲ್ಲಿ ಹಾಗೆನ್ನುವುದಿಲ್ಲ. ಕಾಲದಲ್ಲಿ ಯಾರು ಧರ್ಮ-ಕರ್ಮಪೂರ್ಣನಾಗಿರುತ್ತಾನೋ ಅವ ನ್ನೇ ಅನಂತರದ ಸಂತಾನವು 'ಅವತಾರಿ'ಯೆನ್ನುವುದು. ಈ ಪದ್ಧತಿ ೇನೂ ದೋಷಪೂರ್ಣವಲ್ಲ. ಇದರಿಂದ ಈಶ್ವರನನ್ನು ಅವಮಾನಿಸಿ ಂತೆಯೂ ಆಗುವುದಿಲ್ಲ. 'ಮನುಷ್ಯನು ದೇವರಲ್ಲ; ಆದರೆ ದೇವರ ಬೆಳಕಿ ಂದ ಬೇರೆಯಾಗಿಲ್ಲ'ವೆನ್ನುವುದೇ ಇದರ ಆಧಾರವು. ತನ್ನ ಯುಗದಲ್ಲಿ ಶೇಷ ಧರ್ಮಜಾಗೃತಿಯುಳ್ಳವನೇ ಅವತಾರಿಯು. ಈ ವಿಚಾರ ಸರಣಿ ಂದಲೇ ಶ್ರೀಕೃಷ್ಣನು ಇಂದು ಹಿಂದೂಧರ್ಮಸಾಮ್ರಾಜ್ಯದ ಚಕ್ರವರ್ತಿ ಾಗಿದ್ದಾನೆ.

ಗೋ:—ಶ್ರೀಕೃಷ್ಣನು ಕಾಲ್ಪನಿಕನಾದರೂ, ಅವನ ಹೆಸರಲ್ಲಿರುವ (!) ೀತೆಯ ಮಹಿಮೆಯು ಲೋಕದಲ್ಲಿ ಬೆಳೆಯಲು ಕಾರಣವೇನು?

ವೋ:—ಸಮಸ್ತ ಪ್ರಪಂಚದ ಸಾಹಿತ್ಯದಲ್ಲಿಯೇ ಗೀತೆಯಂತಹ ತ್ತಮ ಗ್ರಂಥವಿಲ್ಲ. ನಮ್ಮ ಗ್ರಂಥಭಂಡಾರದೊಳಗೆ ಅದು ಶುದ್ಧ ಮತ್ತು ಜಸ್ವಿ ರತ್ನವೊಂದಾಗಿದೆ. ಸಂಕ್ಷೇಪವಾಗಿ ಹೇಳುವುದಾದರೆ, ಸಮಸ್ತ ಾಚರದ ಗೂಢಾತಿಗೂಢ ತತ್ವಗಳನ್ನು ಬೋಧಿಸುವ ಗ್ರಂಥವು 'ವಿಶ್ವ ಾಹಿತ್ಯ'ದಲ್ಲಿಯೇ ಬೇರೊಂದಿಲ್ಲ. ವರ್ಣಾಶ್ರಮಗಳ, ಜಾತಿಭೇದಗಳನ್ನು ಾನಿಸವೆ, ಸಾಮ್ಯದೃಷ್ಟಿಯಿಂದ, ಸದ್ಗತಿಯನ್ನುಪದೇಶಿಸುವ, ಇತರ ರ್ಮಗಳ ಕುರಿತು ಅಸಮಸಹಿಷ್ಣುತೆಯನ್ನು ತೋರಿಸುವ, ಜ್ಞಾನ-ಭಕ್ತಿ

ಮತ್ತು ಕರ್ಮ-ಯೋಗದಿಂದ ಕೂಡಿದ ಗೀತಾಗ್ರಂಥವು ಸನಾತನ ಧರ್ಮ ವೃಕ್ಷದ ಅಮೃತಫಲವಾಗಿದೆ. ಹಿಂದೂಧರ್ಮೀಯರು ಮಾತ್ರವಲ್ಲ, ಪ್ರತಿ ಯೊಬ್ಬ ಮಾನವನೂ ಮಾನವತ್ವದ ತತ್ವವನ್ನು ತಿಳಿಯಬೇಕಾದರೆ, ಮೊದಲು ಗೀತೆಯನ್ನು ಅಭ್ಯಾಸಿಸಬೇಕು. ಹಿಂದೂಧರ್ಮದ ತತ್ವಗಳನ್ನು ಸಾಮ್ಯ ಭಾವದಿಂದ, ಇತರ ಧರ್ಮಗಳನ್ನು ಸಹಕರಿಸಿ ಪ್ರತಿಪಾದಿಸುವ ಮತ್ತು ಬೋಧಿಸುವ ಗ್ರಂಥವೇ ಗೀತೆಯು. ಆದುದರಿಂದಲೇ ಗೀತೆಯ ಮಹತ್ವವು ಹೆಚ್ಚಿರುವುದು. 'ಗೀತೆ'ಯನ್ನಾದರಿಸದ ಮಾನವನ ಮೆದುಳೇ 'ಮುರುಕು' ಎಂದರೂ ತಪ್ಪಾಗದು. ಯಾವ ಜಾತೀಯತೆ ಯಾ ಸಾಂಪ್ರದಾಯಿಕತೆ ಯನ್ನೂ ಗಣಿಸದೆ ಗೀತೆಯನ್ನು ಅಧ್ಯಯಿಸಬೇಕು. ಸಾಂಪ್ರದಾಯಿಕತೆಯ ಡಾಂಭಿಕತೆಯ ದೃಷ್ಟಿಯಿಂದಲ್ಲ. ವಿಶ್ವಧರ್ಮವನ್ನರಿಯುವ ಲವಲವಿಕೆ ಯಿಂದ ಪ್ರತಿಯೊಬ್ಬ ಭಾರತೀಯ ಬಾಲಕನ ತೊದಲ್ನುಡಿಯೂ ಗೀತೆ ಯಿಂದಲೇ ಮೊದಲಾಗುವಂತಾಗಬೇಕು. ಇದಕ್ಕಾಗಿ 'ಗೀತೆ'ಗೆ ಉಚಿತ ಸ್ಥಾನವನ್ನು ರಾಷ್ಟ್ರೀಯ ಶಾಲೆಗಳಲ್ಲೀಯಬೇಕು.

ಗೋ:—ಇಂದೂ ದೊಡ್ಡ ದೊಡ್ಡ ಸಂಸ್ಥೆಗಳಲ್ಲಿ, ವಿಶ್ವವಿದ್ಯಾಲಯ ಗಳಲ್ಲಿ 'ಗೀತೆ'ಗೆ ಯೋಗ್ಯಸ್ಥಾನವಿಲ್ಲವೆಂದಿಲ್ಲ. ಆದರೂ 'ಗೀತೆ'ಯಿನ್ನೂ ವಿಶ್ವಪ್ರೇಮವನ್ನು ಸಂಪಾದಿಸಿರುವುದಿಲ್ಲವಲ್ಲ?

ನೋ:—ಕೆಲವು ವರ್ಷಗಳ ಮಾತು. ಮೈಸೂರು ರಾಜ್ಯವು ಹಿಂದೂ ಧರ್ಮ-ಸಂಸ್ಕೃತಿಗಳ ತವರೂರೆಂದು ಕೇಳಿದ್ದೆ. ಆದರೆ, ಅಲ್ಲಿಯ ಒಂದು ಹಿಂದೂ ಶಾಲೆಯ ವಿದ್ಯಾರ್ಥಿಗಳು 'ಗೀತೆ'ಯ ಹೆಸರನ್ನೇ ಕೇಳಿರಲಿಲ್ಲ. 'ಗೀತೆ'ಯ ಕುರಿತು ನನಗೆ ಪಕ್ಷಪಾತವಿದೆ. 'ಗೀತೆ'ಯ ಶಿಕ್ಷಣವು ಶಾಲೆ ಗಳಲ್ಲಿ ಮಾತ್ರವಲ್ಲ, ಪ್ರತಿಯೊಬ್ಬ ಭಾರತೀಯನ ಮನೆಯಲ್ಲೂ ಕಡ್ಡಾಯ ವಾಗಿ ಕೊಡಲ್ಪಡಬೇಕು. ಒಬ್ಬ ಹಿಂದೂ ಬಾಲಕ ಅಥವಾ ಬಾಲಕಿಯು, ಗೀತೆಯನ್ನರಿಯದಿರುವುದು ನಮ್ಮ ಅಕರ್ಮಣ್ಯತೆಯ ಗುರುತು. 'ಗೀತೆ' ಯನ್ನು ವಿಶ್ವವ್ಯಾಪಿಸಿಯನ್ನಾಗಿ ಮಾಡುವುದೇ ನಮ್ಮ 'ಗುರಿ'ಯಾಗಿರಬೇಕು.

ಗೋ:—ಹೀಗಾದ ಮಾತ್ರಕ್ಕೆ 'ಗೀತೆ'ಯು ವಿಶ್ವವ್ಯಾಪಿಸಿಯಾಗ ಬಲ್ಲುದೇ?

ನೋ:—ಬಲ್ಲುದು. ಆದರೆ, ಹೊರಗಿನ ದಬ್ಬಾಳಿಕೆಯಿಂದಲ್ಲ. ಂದೂಸ್ಥಾನವು ಹಿಂದೂಗಳದು ಮಾತ್ರವಲ್ಲ. ಇಲ್ಲಿಯ ಶಾಲೆಗಳೂ ಂದೂ ಬಾಲಕರಿಗಾಗಿಯೆ ಅಲ್ಲ. ಪ್ರತಿಯೊಂದು ಸಂಪ್ರದಾಯ-ಜಾತಿ- ತದವರು ತಮ್ಮತಮ್ಮ ಧರ್ಮಗ್ರಂಥಗಳ ಶ್ರೇಷ್ಠತೆಯನ್ನೇ ಪ್ರತಿಪಾದಿಸ ಹುದು. ಆದರೆ, 'ಗೀತೆ'ಯನ್ನು ಪ್ರಪಂಚದೊಳಗೆಲ್ಲ ಪ್ರಚಾರಪಡಿಸ ೕಕಾದರೆ, ಗೀತಾಪ್ರಚಾರಕರು 'ಗೀತೆ'ಯ ಹೊರೆಯನ್ನು ಇನ್ನೊಬ್ಬರ ೂರಳಿಗೆ ಒತ್ತಾಯದಿಂದ ಕಟ್ಟುವ ಹವ್ಯಾಸಕ್ಕೆ ಹೋಗದೆ, ತಮ್ಮ ಜೀವನ ಯರ್ಯೆಯಲ್ಲಿ 'ಗೀತೆ'ಯ ಮೂರ್ತಸ್ವರೂಪವನ್ನು ತೋರಿಸಬೇಕು.

ಗೋ:—ಇದೀಗ ತಿಳಿಯಿತು 'ಗೀತೆ'ಯ ಗುಟ್ಟು. ಆದರೆ, **ಈಗ** ಾನು ಸ್ಪೃಶ್ಯಾಸ್ಪೃಶ್ಯತೆಯ ಗುಟ್ಟನ್ನು ಬಯಲಿಗೆಳೆಯಲಾಶಿಸುತ್ತೇನೆ.

ನೋ:—ಒಳ್ಳೆಯದು. 'ಸ್ಪೃಶ್ಯ-ಅಸ್ಪೃಶ್ಯ'ವೆಂಬ ಭಾವನೆಗೇ ನನ್ನಲ್ಲಿ ಡೆಯಿಲ್ಲ. 'ಅಸ್ಪೃಶ್ಯತೆ'ಯೆನ್ನುವುದು ಮಹಾ ಪಾಪವು. ಅದು ಹಿಂದೂ ರ್ಮಮಂದಿರಕ್ಕೆ ಹಿಡಿದಿರುವ ಗೆದ್ದಲು! ಆದಷ್ಟು ಬೇಗ ಅದನ್ನು ನಾಶ ಡಿಸುವುದು ಒಳಿತು. ಪ್ರಾಚೀನವಿದ್ದ ಮಾತ್ರಕ್ಕೆ ಅದೇನೂ ಅನುಕರಣೀಯ ಂತಾಗುವುದಿಲ್ಲ.

ಗೋ:—ಹಾಗಾದರೆ, ನಮ್ಮಲ್ಲಿ ಹೇಳುವುದುಂಟು: 'ಇದು ನಮ್ಮ ೂರ್ವಿಕರ ಕಾಲದಿಂದಲೂ ನಡೆದು ಬಂದ ಪದ್ಧತಿ. ಬಿಡಬಾರದು' ಂದು. ಈಗ ಉತ್ತರ ದೇಶದಲ್ಲಿ ನೋಡಿರಿ. 'ಪರ್ದೆ'ಯ ಅವಸ್ಥೆ. ದಕ್ಕೆ 'ಘೋಷಾ ಪದ್ಧತಿ'ಯೆನ್ನುತ್ತಾರೆ. ಇದರ ಆಚರಣೆಯು ಯಾವ ಾಸ್ತ್ರವಿಹಿತವೋ ಗೊತ್ತಿಲ್ಲ. ಆದರೂ, 'ಪೂರ್ವಾಚಾರ' 'ವೃದ್ಧಾಚಾರ' ಂದು ಬಿಡುವುದಿಲ್ಲವಲ್ಲ? ಇದರ ಅರ್ಥವೇನು?

ನೋ:—ಪ್ರಾಚೀನ ಅಥವಾ ವೃದ್ಧಾಚಾರವೆಂದ ಮಾತ್ರಕ್ಕೆ ಅನುಕರ ೕಯ ಮತ್ತು ಶ್ರೇಷ್ಠವೆಂತಾದರೆ ತಪ್ಪಾಗದಿರದು. 'ಪಾಪ'ವೆಂಬುವುದೂ ್ರಾಚೀನವು. ಬ್ರಹ್ಮಸೃಷ್ಟಿಯೊಡನೆಯೇ ಪಾಪ-ಪುಣ್ಯಗಳೆರಡೂ ಜನಿಸಿರು ುವು. ಆದರೆ, ಪುಣ್ಯಕ್ಕಿರುವ ಪ್ರಾಶಸ್ತ್ಯವು ಪಾಪಕ್ಕಿಲ್ಲ. ಎಷ್ಟೇ ್ರಾಚೀನವಿದ್ದರೂ, ಬುದ್ಧಿಗ್ರಾಹ್ಯವಲ್ಲದಿದ್ದರೆ, ತ್ಯಜಿಸಲೇಬೇಕು. 'ಪರ್ದೆ'ಯ

ಅವಸ್ಥೆಯೂ ಇದೇ. ಪ್ರಾಚೀನವಿದ್ದರೂ,, ಅದರಿಂದಾಗುವ ಹಾನಿಯನ್ನು ಗಮನಿಸಿಯಾದರೂ ಪರ್ದಾಪದ್ಧತಿಗೆ 'ಜಲಾಂಜಲಿ'ಯನ್ನೀಯಲೇ ಬೇಕು. ಸ್ತ್ರೀ-ಪುರುಷರ ಸಂಯುಕ್ತ ಉನ್ನತಿಗೆ, ರಾಷ್ಟ್ರದ ಭಾವೀನಿರ್ಮಾಣಕ್ಕೆ, ಧರ್ಮದ ಸದುಪಯೋಗಕ್ಕೆ ಪರ್ದೆಯಿಂದಿರುವ ಹಾನಿಯು ಅಷ್ಟಿಷ್ಟಲ್ಲ.

ಗೋ:—ಆದರೆ, ಅಸ್ಪೃಶ್ಯತೆಯನ್ನು ಪಾಪವೆನ್ನುವುದೆಂತು? ಶ್ರುತಿ ಸ್ಮೃತಿಗಳನ್ನು ಅಭ್ರಾಂತ ಪ್ರಮಾಣವೆಂದು ನಂಬುವವರು ನಾವು 'ದೇವ ಯಾತ್ರಾ ವಿವಾಹೇಷು ಸಂಕಟೇ ರಾಜ್ಯವಿಪ್ಲವೇ, ಉತ್ಸವೇಷು ಚ ಸರ್ವೇಷು ಸ್ಪೃಶ್ಯಾಸ್ಪೃಶ್ಯಾ ನ ದುಷ್ಯತಃ' ಎಂಬ ಅಪವಾದವನ್ನು ಬಿಟ್ಟು ಉಳಿದ ಕಡೆಯಲ್ಲಿಯೂ, ಅಸ್ಪೃಶ್ಯತಾ ನಿವಾರಣೆಯನ್ನು ಸಾಧಿಸುವುದು ಹೇಗೆ? ಹಿಂದೂಧರ್ಮಶಾಸ್ತ್ರದಲ್ಲೇ ಅಸ್ಪೃಶ್ಯತೆಯಿಲ್ಲವೆನ್ನುವುದು ಹೇಗೆ? 'ತಸ್ಮಾಚ್ಛಾಸ್ತ್ರಂ ಪ್ರಮಾಣಂ ತೇ ಕಾರ್ಯಾಕಾರ್ಯ ವ್ಯವಸ್ಥಿತೌ' ಎಂಬ ವಾಕ್ಯದಲ್ಲಿ ಅಚಲ ಶ್ರದ್ಧೆಯುಳ್ಳ ಹಿಂದೂ ಜನತೆಯ ಮಧ್ಯದಲ್ಲಿ ಅಸ್ಪೃಶ್ಯತಾ ನಿವಾರಣವು ಶಾಸ್ತ್ರಸಮ್ಮತವೆಂದು ಸಿದ್ಧಪಡಿಸದೆ, ಅದರ ಪ್ರಚಾರವು ಹೇಗೆ ಸಫಲವಾದೀತು?

ಮೋ:—ನಾನು ಮೊದಲೇ ಹೇಳಿರುವೆನು. ನನಗೆ ನಿಮ್ಮ ಮನು ಪರಾಶರರ ವಿಚಾರ ಗೊತ್ತಿಲ್ಲ. ನಿರ್ಣಯಸಿಂಧು-ಧರ್ಮಸಿಂಧುಗಳನ್ನು ಕಂಡಿಲ್ಲವೆಂದು ನಾನು ಹೇಳುವುದು. ಅರಿತಿರುವ ತತ್ವ ಮತ್ತು ತಿಳಿದುಕೊಂಡ ಜ್ಞಾನದ ಸಹಾಯದಿಂದ ಹೆಸರಿದ್ದ ಮಾತ್ರಕ್ಕೆ ಶ್ರುತಿ-ಸ್ಮೃತಿಗಳು ಧರ್ಮ ವಾಕ್ಯಗಳಾಗವು. ಸತ್ಯ ಪ್ರಮಾಣದ ಶುದ್ಧ ಸಿದ್ಧಾಂತಗಳಿಗೆ ವಿರುದ್ಧವಾಗಿ ರುವ ಮಾತು ಯಾವುದೇ ಇರಲಿ, ಧರ್ಮಪ್ರಮಾಣವೆನ್ನಲಾಗದು. ಮನುಸ್ಮೃತಿ ಮೊದಲಾದ ಪ್ರಾಚೀನ ಶಾಸ್ತ್ರಗಳು ಈಗಿರುವಂತೆಯೇ ಮೊದಲಿನಿಂದಲೂ ಇದ್ದುವೆನ್ನಲಾಗುವುದಿಲ್ಲ.

ಒಂದೇ ಗ್ರಂಥದೊಳಗಿನ ಎರಡೇ ವಾಕ್ಯಗಳಲ್ಲಿ ತೋರಿಬರುವ ಅಜಗಜದಷ್ಟಿರುವ ಭೇದವೇ ಇದರ ಆಧಾರವು! ಸನಾತನ ರೀತಿ-ನೀತಿಗಳಿಗೆ ವಿರುದ್ಧವಾದ ಅನೇಕ ವಚನಗಳನ್ನು ನಾವದರಲ್ಲಿ ಕಾಣಬಹುದು. ಶ್ರುತಿಗಳ ರಹಸ್ಯವನ್ನು ನೋಡಿದರೆ, ಅಸ್ಪೃಶ್ಯತೆಯ ಅಗ್ರಾಹ್ಯತ್ವವು ಸಿದ್ಧ

ರಾದೀತು. ಇಂದು ನಾವು ಪಂಚಮ ಅಥವಾ ಅಂತ್ಯಜರೆಂದು ಕರೆಯುವ ಜನರನ್ನು ಅಸ್ಪೃಶ್ಯರೆನ್ನಲು ಶಾಸ್ತ್ರವಚನವೇ ಸಿಗದೆಂದು ನಾನು ಹೇಳು ತ್ತೇನೆ. ಪ್ರಚಂಡ ಶಾಸ್ತ್ರಸಮೂಹವೂ ಇಂದಿನ ಅಸ್ಪೃಶ್ಯತೆಯನ್ನು ಸಮ ರ್ಥಿಸಲಾರದು. ವ್ಯಾಖ್ಯೆ ಮಾಡಲು ಪ್ರಮಾಣ ಸಿಗದು. ಗೋಪಾಲ! ನೀನು ಉದ್ಧರಿಸಿರುವ ಅಪವಾದ ಶಾಸ್ತ್ರವನ್ನೇ ಆಧರಿಸಿದರೂ ನನ್ನ ಕೆಲಸವು ನೂರು ಮುಕ್ಕಾಲು ವೀಸದಷ್ಟು ನೆರವೇರಿದಂತೆಯೇ ಸರಿ. ಅದರೊಳ ಗಿನ ಪ್ರಸಂಗವೇ ಇಂದು ನಮ್ಮ ಮುಂದಿರುವುದು. ಈ ವಾಕ್ಯದಲ್ಲಿ ಇಷ್ಟು ಸರಳ ಮಾರ್ಗವಿರುವಾಗ ಇಂದಿನ ಪಂಡಿತರು, ಬ್ರಾಹ್ಮಣಶ್ರೇಷ್ಠ(?)ರು ಅಸ್ಪೃಶ್ಯತೆಯನ್ನು ಸಮರ್ಥಿಸುತ್ತಿರುವಂತೆ, ಜನತೆಯನ್ನು ತಪ್ಪು ದಾರಿ ಗೊಯ್ಯುವುದು ಸರಿಯಲ್ಲ. ನಿನ್ನ ಪ್ರಶ್ನೆಗುತ್ತರವಾಗಿ ಈ ಅಪವಾದ ದಿಂದಲೇ ಸಮಾಧಾನ ಕೊಟ್ಟದಾಯಿತು. ಆದರೆ, ಶಾಸ್ತ್ರವೆಂದರೇನು? ಎಂಬುದನ್ನು ವಿವರಿಸುವೆನು. ಸಂಸ್ಕೃತ ಭಾಷೆಯಲ್ಲಿ ಮುದ್ರಿತವಾಗಿದ್ದ ಮಾತ್ರಕ್ಕೆ 'ಶಾಸ್ತ್ರ'ವೆನ್ನುವುದಾದರೆ ಪಾಪವು ಪುಣ್ಯವಾದೀತು! ಪುಣ್ಯವು ಪಾಪವಾದೀತು! ಹೀಗೆ ಮಾಡುವುದು ಸರಿಯಲ್ಲ. ಶ್ರೀಭಗವದ್ಗೀತೆಯ ಲ್ಲಿನ 'ಸ್ಥಿತಪ್ರಜ್ಞ'ನ ವಚನವೇ ಶಾಸ್ತ್ರದ ಬುದ್ಧಿಗ್ರಾಹ್ಯವಾದ ಅರ್ಥವಾಗ ಬಲ್ಲುದು. ಆದುದರಿಂದ ಇಂದಿನ ಪಂಡಿತರು, ಜನತೆಯನ್ನು ಸನ್ಮಾರ್ಗಕ್ಕೆ ಕೊಂಡೊಯ್ಯಬೇಕೆಂದಿದ್ದರೆ, ಪಾಂಡಿತ್ಯದೊಡನೆಯೇ ಪ್ರಜ್ಞೆಯನ್ನು ಸ್ಥಿರ ಪಡಿಸಬೇಕು. ಮತ್ತು ರಾಗ-ದ್ವೇಷಗಳನ್ನು ತ್ಯಜಿಸಬೇಕು. ಪಂಡಿತರು ತಪಶ್ಚರ್ಯೆಯ ಮೂಲಕ 'ಗೀತೆ'ಯ ಬ್ರಹ್ಮಭೂತರಾಗುವ ತನಕ ನನ್ನಂ ತಹ ಪ್ರಾಕೃತನು ಯಾರ ವಿರೋಧವನ್ನೂ ಎಣಿಸದೆ 'ಸೇವೆ'ಮಾಡುತ್ತಿರು ವುದೇ ಉಚಿತವು.

ಗೋ:—ಅಸ್ಪೃಶ್ಯತೆಯ ಸಮಸ್ಯೆಯು ಜಟಿಲವಾಗಿದೆ. ಅವರು ನಿಜವಾಗಿಯೂ ಹಿಂದೂಗಳು; ರಾಮ-ಕೃಷ್ಣ ಮೊದಲಾದವರನ್ನು ಭಜಿಸು ವವರು. ಆದರೆ ಇವರನ್ನು ಮುಸಲ್ಮಾನರು ತಮ್ಮ 'ದಯಾದ'ವನ್ನಾಗಿ ಕೇಳುವುದೇ ಶುದ್ಧಿ ಚಳವಳಕ್ಕೆ ಕಾರಣವಾಯಿತು. ಇದರಲ್ಲಿ ಮುಸ ಲ್ಮಾನ ಬಂಧುಗಳ ತಪ್ಪಿರುವುದಷ್ಟೇ ಹಿಂದೂಗಳ ಅಸಡ್ಡೆಯೂ ಇತ್ತು.

ಆದರೆ, ಇಂದು ಪಂಗಡಗಳೆರಡೂ ಎಚ್ಚೆತ್ತಿವೆ. ತಮ್ಮ ಹಿಂದೂ-ಮುಸಲ್ಮಾನೈಕ್ಯದ ಚಳವಳವು ಸಾಗುತ್ತಲಿದೆ. ಆದರೆ ಇದರ ಸಾಫಲ್ಯದ ವಿಚಾರದಲ್ಲಿ ನನಗೊಂದು ಸಂದೇಹವುಂಟಾಗಿದೆ.

'ಇಸ್ಲಾಮನ್ನು ನಂಬದವರು 'ಕಾಫಿರ'ರು ಅರ್ಥಾತ್ ನಾಸ್ತಿಕರು. ಅವರನ್ನು ವಧಿಸುವುದು ಇಸ್ಲಾಮಿನ ಆಜ್ಞೆ. ಮುಸಲ್ಮಾನನಾಗುವುದೇ ಪ್ರಪಂಚದಲ್ಲಿ ಬಾಳಿರಲು ಪಡೆಯುವ ಅಧಿಕಾರದ ದಾರಿ ಎಂಬ ಭಾವನೆಯು ಮುಸಲರಲ್ಲೆಲ್ಲರಲ್ಲಿಯಲ್ಲವಾದರೂ ಹಲವರಲ್ಲಿ ನೆಲೆಗೊಂಡಿರುವುದು ಗೋಚರವಾಗುತ್ತಿರುವಾಗ 'ಹಿಂದೂ ಸಂಘಟನ'ದ ಚಳವಳವನ್ನು ಮುಂದೊತ್ತುತ್ತ ಹಿಂದೂ-ಮುಸಲರಲ್ಲಿ ಐಕ್ಯಸ್ಥಾಪನೆಯಾಗುವುದಾದರೂ ಹೇಗೆ?

ನೋ:—ನಿನ್ನಂತಹ ಸುಸಂಸ್ಕೃತನಿಗೂ ಈ ಭ್ರಮವಿರುವುದು ನಾಚಿಕೆಯನ್ನುಂಟುಮಾಡುತ್ತಿದೆ. ಇತರರನ್ನು ದ್ವೇಷಿಸುವ ಯಾ ಹೀಯಾಳಿಸುವ ಶಿಕ್ಷಣವನ್ನು ಇಸ್ಲಾಮು ಧರ್ಮವು ಕೊಡುವುದಿಲ್ಲ. ಈ ವಿಚಾರವು ಪೌರಾಣಿಕರಲ್ಲಿ ನೆಲೆಗೊಂಡೂ ಇರುವುದಿಲ್ಲ. ವಿಪರೀತ ಭಾವನೆಯುಳ್ಳ ಮುಸಲ್ಮಾನರು ಇಲ್ಲವೇ ಇಲ್ಲವೆಂದೆನ್ನಲಾಗುವುದಿಲ್ಲವಾದರೂ ಅವರಿಂದಾಗಿ ಭಯಪಡುವ ಕಾರಣವಿಲ್ಲ. ಹಿಂದೂ ಸಂಘಟನವು ಹಿಂದೂಗಳ ಪಾವಿತ್ರ್ಯವನ್ನೇ ಆಧರಿಸಿಕೊಂಡಿದೆ. ಆತ್ಮವೇ ಆತ್ಮನನ್ನು ಕಾಪಾಡಬಲ್ಲುದು. 'ತಾನೊಳ್ಳೆಯವನಾದರೆ ಜಗತ್ತೇ ಒಳ್ಳೆಯದೆ'ಂಬ ನ್ಯಾಯದಂತೆ ಆಚರಿಸಬೇಕು. ನನ್ನ ಅನುಭವವು ನನಗೆ ಹೀಗೆಯೇ ಹೇಳುತ್ತದೆ.

ಗೋ:—ತಿಳಿಯಿತು. ಇನ್ನೊಂದು ವಿಚಾರ; ಮೂರ್ತಿಪೂಜೆಯ ಪ್ರಶ್ನೆ. ಈ ವಿಚಾರದಲ್ಲಿ ಜಾತಿ-ಜಾತಿಗಳೊಳಗೆ-ಸಂಪ್ರದಾಯ-ಸಂಪ್ರದಾಯದವರೊಳಗೆ ತರ್ಕ-ವಿತರ್ಕಗಳು ಮೇರೆ ಮೀರಿವೆ. ತಮ್ಮ ಅಭಿಪ್ರಾಯದಲ್ಲಿ ಮೂರ್ತಿಪೂಜೆಗಿರುವ ಸ್ಥಾನವಾವುದು? ಮೂರ್ತಿಪೂಜೆಯು ತಮ್ಮ ಮತಸಮ್ಮತವಾದರೆ, ಪೂಜೆಯ ವಿಧಿಯೇನು? ಯಾವನಾದರೊಬ್ಬ ಮಹಾಪುರುಷನ ಮೂರ್ತಿದರ್ಶನವೇ ಪರ್ಯಾಪ್ತವೊ? ಯಾ ನೈವೇದ್ಯಾದಿಗಳೂ ಅಪೇಕ್ಷಿತವೋ? ಮೂರ್ತಿಯು ಜಡವಸ್ತುವಾಗಿರುವಾಗ ಅದರ ಮುಂದಿಡುವ ಭಕ್ಷ್ಯಾದಿಗಳ ಸಾರ್ಥಕತೆಯೇನು?

ನೋ:—ಮೂರ್ತಿಪೂಜೆಯನ್ನು ನಾನು ಸಮರ್ಥಿಸುತ್ತೇನೆ ಮಾತ್ರ ಲ್ಲ, ನಾನು ಮೂರ್ತಿಪೂಜಕನು. ಪೂಜೆಯ ವಿಧಿಯನ್ನು ನಾನರಿಯೆನು. ್ಯಕ್ತಿಯಾಗಲಿ, ಸಮಾಜವಾಗಲಿ, ತನ್ನಿಷ್ಟದಂತೆ ಪೂಜಾವಿಧಿ-ವಿಧಾನ ಳನ್ನು ಮಾಡಿಕೊಳ್ಳುವರು. ಆ ವಿಧಿ-ವಿಧಾನದ ಮೂಲಕವೇ ನಾವು ಆ ್ಯಕ್ತಿಯ, ಯಾ ಸಮಾಜದ ದಿಗ್ದರ್ಶನವನ್ನು ಮಾಡಿಸುವೆವು. 'ವಿಧಿ' ಲ್ಲಿ ಧರ್ಮದ ನ್ಯೂನತೆ ಮತ್ತು ರೂಢಿಯ ಅಧಿಕತೆ ಇರುವುದು ವಾಡಿಕೆ. ಕ್ತನಂತೆ ಭಗವಂತನು! ಈ ವಿಷಯದಲ್ಲಿ ಕಲ್ಪನೆಯೇ ಮುಖ್ಯವು. ಲ್ಪನೆಯು ಕೆಲಸಮಾಡುತ್ತಿರುವ ತನಕ ಇದು ನಿಜವಾದ ವಸ್ತುವೆಂದೇ ೋಚರವಾಗುತ್ತದೆ.

ಗೋ:—ಮೂರ್ತಿಯು ಯಾವಾಗಲೂ ವ್ಯಕ್ತಿಯನ್ನಾಧರಿಸಿ ಕಲ್ಪಿಸ ್ಪಡುತ್ತದೆ. ಆ ವ್ಯಕ್ತಿಯು ಮಹಾಪುರುಷನಿರಲಿ, ಅವತಾರಿಯಾಗಿರಲಿ, ಂತೂ ಶರೀರಧಾರಿಯದೆಂಬುದು ನಿಜ. ಶರೀರಿಯಲ್ಲಿ ಗುಣ-ದೋಷಗಳೆ ಡೂ ಇರುವುದು ಸ್ವಾಭಾವಿಕ. ಮಹಾಪುರುಷರೂ ಇದಕ್ಕೆ ಅಪವಾದ ಾಗಿಲ್ಲ. ಹೀಗಿರುತ್ತ ಉಪಾಸಕನು ಉಪಾಸ್ಯ ಮೂರ್ತಿಯ ಗುಣಗಳಿಗೆ ಾಗಿಯಾಗುವಂತೆ ದೋಷಗಳಿಗೂ ಆಗಬೇಡವೇ? ತಾವಿಂತಹ ಮೂರ್ತಿಯ ುಪಾಸನೆಯನ್ನು ಸಮರ್ಥಿಸುವಿರೋ?

ನೋ:—ನಮ್ಮ ಉಪಾಸ್ಯಗಳು ಎರಡು ವಿಧವವುಗಳಾಗಿರ ಹುದು. ಆದರ್ಶ ಎಂದರೆ, ನಿರ್ದೋಷವಾದ್ದು. ಅರ್ಥಾತ್ ಕಾಲ್ಪ ಕ! ಇನ್ನೊಂದು ಐತಿಹಾಸಿಕವು. ಕಾಲ್ಪನಿಕ ಉಪಾಸ್ಯವು ನಿರ್ದೋಷವಾ ರುವುದು ಅಸಂಭವವಲ್ಲ. ಆದುದರಿಂದ ನಾನು ಕಾಲ್ಪನಿಕ ಆದರ್ಶ ಮೂರ್ತಿಯ ಉಪಾಸಕನು. ಸಂಪೂರ್ಣಾವತಾರ ಶ್ರೀಕೃಷ್ಣಚಂದ್ರನು ಾಲ್ಪನಿಕ ಆದರ್ಶಪುರುಷನು. ಐತಿಹಾಸಿಕ ಶ್ರೀಕೃಷ್ಣನು ಸಂಪೂರ್ಣ ದೋಷಿಯಲ್ಲ. ಉಪಾಸ್ಯವೇ ಸದೋಷವಾಗಿದ್ದರೆ, ಉಪಾಸಕನು ದೋಷಿಯಾಗಲಾರನು! ಗುರಿಯೇ ತಪ್ಪಾಗಿದ್ದರೆ ಗುರಿಸಿಗುವುದೆಂತು?

ಗೋ:—ನಾವೀಗ ಮಾಡುವ ಪೂಜೆಯು ಜಡವಾದ ಮೂರ್ತಿ ಯಲ್ಲಿ. ಜೀವಾತ್ಮನುಳ್ಳದ್ದನ್ನು ಮಾತ್ರ ಚೇತನವೆನ್ನುವುದು ಸಪ್ರಮಾಣವು.

ಆದರೆ, ಸರ್ವವ್ಯಾಪಕ ಚೇತನತತ್ವವು ಜಡವಸ್ತುವಿನಲ್ಲಿಯೂ ಇರುವಾಗ ಮಾತ್ರವಲ್ಲ, ಅಖಿಲಬ್ರಹ್ಮಾಂಡವನ್ನೂ ವ್ಯಾಪಿಸಿರುವಾಗ ಆ ದೈವೀಜ್ಯೋತಿಯನ್ನು 'ಮೂರ್ತಿಸೀಮಿತ'ವನ್ನಾಗಿ ಮಾಡುವುದು ಸರಿಯೇ? ಇದರಿಂದ ಈಶ್ವರನಲ್ಲಿ ನ್ಯೂನತೆಯನ್ನಾರೋಪಿಸಿದಂತಾಗಲಿಲ್ಲವೇ? ಸಾರ್ವಭೌಮ ಪ್ರಭುವನ್ನು ಗ್ರಾಮಾಧಿಕಾರಿಯಾದ 'ಪಟೇಲ'ನೆಂದರೆ, ಸಾರ್ವಭೌಮನ ಕೋಪಕ್ಕೆ ಪಾತ್ರನಾಗಬೇಕಲ್ಲವೇ?

ಮೋ:— ಚಕ್ರವರ್ತಿಯನ್ನು ನಾವೇನೂ ಗ್ರಾಮಾಧಿಕಾರಿ ಪಟೇಲನೆಂದು ಮಾತ್ರ ಹೇಳುವುದಿಲ್ಲ. ಭೂಮಿಯೊಳಗಿನ ಇತರ ಗ್ರಾಮಗಳಿಗೂ ಅವನು ಸ್ವಾಮಿಯಾಗಿರುವಂತೆ ಈ ಗ್ರಾಮಕ್ಕೂ ಇವನೇ ಸ್ವಾಮಿಯು. ಈ ಗ್ರಾಮದವರಿಗೆ ಆತನು ಇನ್ನಿತರ ಗ್ರಾಮಗಳಿಗೂ ಒಡೆಯನೆಂದು ಗೊತ್ತಿಲ್ಲದಿರಬಹುದು. ಉದಾಹರಣವನ್ನು ನೋಡಿ,–ಭಕ್ತಶಿರೋಮಣಿ ತುಲಸೀದಾಸರ ಇಷ್ಟದೈವತವು ಧನುರ್ಧಾರೀ ಸೀತಾರಮಣ ಶ್ರೀರಾಮಚಂದ್ರನಾಗಿದ್ದನು. ಆದರೆ, ಅವರು ಸುದರ್ಶನಹಸ್ತ ಶ್ರೀಕೃಷ್ಣಮೂರ್ತಿಯಲ್ಲೂ ಶ್ರೀರಾಮನ ದರ್ಶನವನ್ನೇ ಪಡೆಯುತ್ತಿದ್ದರು.

ಗೋ:— ಅಮುಕ ಕಾರ್ಯಸಿದ್ಧಿಗಾಗಿ, ಈಶ್ವರನನ್ನು ಪ್ರಾರ್ಥಿಸಬೇಕು ಎಂದು ತಜ್ಞರು ಹೇಳುವುದುಂಟು. 'ರಾಷ್ಟ್ರಕ್ಷೇಮ'ದಂತಹ ಪ್ರಾರ್ಥನೆಗಳು ಇಂದೂ ನಡೆಯುತ್ತಲಿವೆ. ಆದರೆ, ಕೆಲವರು ವೃಕ್ಷೋಪಾಸಕರೇ ಆಗಿದ್ದಾರೆ. ಅವರು 'ಈಶ್ವರದರ್ಶನ'ವನ್ನು ಅಲ್ಲೇ ಮಾಡುತ್ತಾರಂತೆ. ಅವರು 'ಅಮುಕಕಾರ್ಯಸಿದ್ಧ್ಯರ್ಥಂ' ಎಂದು ವೃಕ್ಷಗಳನ್ನೇ ಏಕೆ ಪ್ರಾರ್ಥಿಸಬಾರದು? ಸಿದ್ಧಿಯು ಸಂಭವವೋ?

ಮೋ:— ಪ್ರಾರ್ಥನೆಯನ್ನು ಎಂದೂ ತಟಸ್ಥನಾದವನು ಮಾಡುವುದಿಲ್ಲ. ರಾಗಪೂರ್ಣ ಯಾ ದ್ವೇಷಪೂರ್ಣ ಪ್ರಾರ್ಥನೆಯೇ ಇಂದು ಲೋಕದಲ್ಲಿ ಹರಡಿರುವುದು. ನನ್ನ ಮತದಲ್ಲಿ ಪ್ರಾರ್ಥನೆಯಲ್ಲಿ 'ರಾಗ-ದ್ವೇಷ'ಗಳಿಗೆ ಎಡೆಯಿರಬಾರದು. ಸರ್ವವ್ಯಾಪಕ ಮತ್ತು ಅಚಿಂತ್ಯಚೇತನ ಶಕ್ತಿಯನ್ನು ಕುರಿತು ಮಾಡುವ ಪ್ರಾರ್ಥನೆಯೇ ನಿಷ್ಕಲ್ಮಷವಾಗಿರಬಲ್ಲುದು. ವೃಕ್ಷಗಳಲ್ಲಿಯೂ ಈಶ್ವರ ಕಲ್ಪನೆಯನ್ನು ಮಾಡುವವರು ಇತರ ಸ್ವಾರ್ಥ

ೂರ್ಣ ಪ್ರಾರ್ಥನೆಗಳನ್ನು ಮಾಡುವ ಬದಲು, ರಾಷ್ಟ್ರಹಿತಕರ ಅಥವಾ ಶ್ವಶಾಂತ್ಯರ್ಥವಾದ ಪ್ರಾರ್ಥನೆಯನ್ನೇ ಮಾಡುವುದುಚಿತವು. ಸಿದ್ಧಿಯ ೂಡವೆಯನ್ನು ಮಾಡುವುದು ನಮ್ಮ ಕೆಲಸವಲ್ಲ. ಶ್ರದ್ಧಾಪೂರ್ವಕ ುಂದುವರಿಯುವುದೇ ಮನುಷ್ಯನ ಕೆಲಸವು.

ಗೋ:—ಶ್ರದ್ಧೆಯು ವಿವೇಕವಿರಬೇಕಷ್ಟೆ? 'ವಿವೇಕಶೂನ್ಯ ಶ್ರದ್ಧೆ'ಯು ಂಧಶ್ರದ್ಧೆಯೆನ್ನಿಸಲ್ಪಡುವುದಿಲ್ಲವೋ? ಇಂದು ಪ್ರಪಂಚದಲ್ಲಿ ಅಂಧ ್ರದ್ಧೆಯ ಕಾರಣವೇ ಅನೇಕ ಅನ್ಯಾಯಗಳು ನಡಿಯುತ್ತಲಿವೆ.

ನೋ:—ನಿನ್ನ ಈ ಸಂದೇಹವೇ ವಿಚಿತ್ರವಾಗಿದೆ. ಶ್ರದ್ಧೆಯೊಂದಿಗೆ ವೇಕಮಾತ್ರವಿದ್ದರೆ ತೀರದು. ಜ್ಞಾನದ ಆವಶ್ಯಕತೆಯಿದೆ. ಶ್ರದ್ಧೆಯು ರ್ವದಾ ಜ್ಞಾನಮಯ ಮತ್ತು ವಿವೇಕಪೂರ್ಣವಾಗಿಯೇ ಇರುತ್ತದೆ. ುದ್ಧಿಮಾತ್ರ ಗ್ರಾಹ್ಯವಾದ್ದು, ಶ್ರದ್ಧೆಯೆಂದೂ ಅನ್ನಿಸದು. ಆದುದರಿಂದ ಂಧಶ್ರದ್ಧೆಯು ಶ್ರದ್ಧೆಯಲ್ಲ. ಬುದ್ಧಿಯು ನಿರುಪಾಯವಾದಾಗಲೇ ಶ್ರದ್ಧೆ ುಂಟಾಗುವುದು.

ಗೋ:—ಬುದ್ಧಿಯು ನಿರುಪಾಯವಾದಾಗ ಶ್ರದ್ಧೆಯುಂಟಾಗುವು ಂದರೆ, ಶ್ರದ್ಧೆಯು ಬುದ್ಧಿಗ್ರಾಹ್ಯವಲ್ಲವೆಂದಾಯಿತು. ಬುದ್ಧಿಗ್ರಾಹ್ಯವಲ್ಲ ್ನನ್ನು ತ್ಯಜಿಸಬೇಕೆಂದು ತಾವೇ ಹಿಂದೊಮ್ಮೆ ನುಡಿದಿರುವಿರಿ. ಹೀಗಿರು ಾಗ, ತಾವು ಹೇಳುವ ಶ್ರದ್ಧೆಯಲ್ಲೇ ಅಂಧತ್ವದ ಸ್ಥಾಪನೆಯಾಯಿತು. ಲ್ಲವೆಂತಾದರೆ ಹೇಗೆ?

ನೋ:—ಸೂತ್ರರೂಪವಾಗಿ ಅಂದರೆ ಸಂಕ್ಷೇಪವಾಗಿ ಮಾತಾಡು ುದು ಕೆಲವೊಮ್ಮೆ ಕೆಡುಕನ್ನುಂಟುಮಾಡುತ್ತದೆ. ನನ್ನ ಸೂತ್ರರೂಪ ುತ್ತರವೇ ನಿನ್ನ ಸಂದೇಹವನ್ನುಂಟುಮಾಡಿತು. ಇರಲಿ; ಅಂಧತ್ವವುಳ್ಳ ್ರದ್ಧೆಯನ್ನು 'ಶ್ರದ್ಧೆ'ಯೆನ್ನುವುದೂ 'ಶ್ರದ್ಧೆ'ಯ ಅಪಮಾನ ಮಾಡಿದಂತೆಯೇ ರಿ. ಯಾರಾದರೂ ಶ್ರದ್ಧಾವಶನಾಗಿ 'ಆಕಾಶದಲ್ಲಿ ಕುಸುಮಗಳಿವೆ' ಂದರೆ, ಅದು ಉಚಿತವೆಂದು ಯಾರೂ ಹೇಳುವುದಿಲ್ಲ. ಆಕಾಶ— ುಸುಮಗಳ ಅಸ್ತಿತ್ವವನ್ನು ನಂಬುವುದು ಶ್ರದ್ಧೆಯಿಂದಲ್ಲ; ಘೋರ ಅಜ್ಞಾನ ಂದ! ಆಕಾಶ ಕುಸುಮದ ಅಸ್ತಿತ್ವ-ನಾಸ್ತಿತ್ವಗಳು ಬುದ್ಧಿಗಮ್ಯವಾದು

ದರಿಂದ 'ಶ್ರದ್ಧೆ'ಯ ಪ್ರಶ್ನೆಯೇ ಅಲ್ಲಿಲ್ಲ. ಇನ್ನು 'ಈಶ್ವರಸಿದ್ಧಾನೆ' ಎಂಬ ವಾಕ್ಯದ ಯಥಾರ್ಥತೆಯ ಅಭಾವವನ್ನು ಸಿದ್ಧಪಡಿಸಲಾರರು. ಬುದ್ಧಿವಾದದ ಬಲದಿಂದ ಯಾರಾದರೂ ಈಶ್ವರನ 'ನಾಸ್ತಿತ್ವ'ವನ್ನೇ ಸಿದ್ಧಪಡಿಸಿದರೂ, ಇದರ ಸಂದೇಹವು ಪ್ರತಿಯೊಬ್ಬನ ಹೃದಯದಲ್ಲೂ ಇದ್ದೇ ಇರುವುದು. ಇಂತಹ ಸಂದೇಹವೇ ಪ್ರಮಾಣದ ಅಸತ್ಯತೆಯನ್ನು ಸಿದ್ಧಪಡಿಸುವುದು. ಇನ್ನೊಂದೆಡೆ, ಕೋಟ್ಯಂತರ ಜನರ ಅನುಭವವು ಈಶ್ವರನ 'ನಾಸ್ತಿತ್ವ'ವನ್ನು ಒಪ್ಪದು. ಯಾವುದಾದರೂ ಪ್ರಸಂಗ ವಿಶೇಷದಲ್ಲಿ, ಶ್ರದ್ಧೆಯನ್ನು ಪುಷ್ಟೀಕರಿಸಲು ಅನುಭವಜ್ಞಾನದ ಆವಶ್ಯಕತೆಯಿದೆ. ಶ್ರದ್ಧೆಯು ಅನುಭವವನ್ನು ಅವಲಂಬಿಸಿದೆ. ಶ್ರದ್ಧೆಯುಳ್ಳವನಿಗೆ ಒಂದಲ್ಲ ಒಂದು ದಿನ ಅನುಭವ ಸಿಗದೆ ಇರದು. ಆದರೆ, ಶ್ರದ್ಧೆಯುಳ್ಳವನು ಅನುಭವವನ್ನು ಅಪೇಕ್ಷಿಸುವುದಿಲ್ಲ. ಕಾರಣ, ಶ್ರದ್ಧೆಯಲ್ಲಿ ಸಂದೇಹಕ್ಕೆ ಆಸ್ಪದವಿಲ್ಲ. ನನ್ನೀ ವಾಕ್ಯದ ಅರ್ಥವು 'ಶ್ರದ್ಧಾಮಯನಾದವನು ಜಡನು. ಅಥವಾ ಜಡಸ್ವರೂಪನು' ಎಂದಲ್ಲ.

ಶುದ್ಧ ಶ್ರದ್ಧಾವಂತನ ಬುದ್ಧಿಯು ತೇಜಸ್ವಿಯಾಗಿರುತ್ತದೆ. ಅವನು ಸ್ವಂತ ಬುದ್ಧಿಬಲದಿಂದ, ಬುದ್ಧಿಗಿಂತಲೂ ಪರವಾಗಿರುವ ವಸ್ತುವು 'ಶ್ರದ್ಧೆ' ಯೆಂಬುದನ್ನರಿಯುವನು. ಬುದ್ಧಿಗೆಟಕದ ವಸ್ತುವನ್ನು ಶ್ರದ್ಧೆಯು ಸಾಧಿಸಬಲ್ಲುದು. ಬುದ್ಧಿಯ ಉತ್ಪತ್ತಿಸ್ಥಾನವು ಮೆದುಳು! ಆದರೆ, ಶ್ರದ್ಧೆಯ ಸೃಷ್ಟಿಸ್ಥಾನವು ಹೃದಯವು!! ಬುದ್ಧಿಬಲಕ್ಕಿಂತ ಹೃದಯಬಲ ಅರ್ಥಾತ್ ಆತ್ಮಬಲವು ಮೇಲೆಂಬುದು ಅನುಭವಸಿದ್ಧವು. ಶ್ರದ್ಧೆಯಿಂದಲೇ ಹಡಗು ನಡಿಯುತ್ತಿದೆ. ಪುರುಷನು ಪುರುಷಾರ್ಥವನ್ನು ಸಾಧಿಸುತ್ತಾನೆ. ಶ್ರದ್ಧಾವಂತನೇ ಪರ್ವತಗಳನ್ನೂ, ಸಾಗರಗಳನ್ನೂ ದಾಟಬಲ್ಲನು. ಶ್ರದ್ಧಾವಂತನನ್ನು ಜಯಿಸಲಾಗುವುದಿಲ್ಲ. ಅವನು ಅಜೇಯನು. ಬುದ್ಧಿವಂತನಿಗೆ ಯಾವಾಗಲೂ 'ಪರಾಜಯದ ಆಶಂಕೆ'ಯಿದ್ದೇ ಇರುವುದು. ಆದರೆ, ಶ್ರದ್ಧಾವಂತನಿಗದಿಲ್ಲ. ಪರಿಣಾಮದಲ್ಲಿ ಅವನಿಗೆ ಆಸಕ್ತಿಯಿಲ್ಲ. ಬಾಲಕ ಪ್ರಹ್ಲಾದನಲ್ಲಿ ಬುದ್ಧಿಯ ನ್ಯೂನತೆಯಿದ್ದಿರಬಹುದು. ಆದರೆ, ಅವನ ಶ್ರದ್ಧೆಯು ಮೇರುಪರ್ವತದಂತೆ ಅಚಲವಾಗಿತ್ತು. ಶ್ರದ್ಧೆಯಲ್ಲಿ ವಿವಾದಕ್ಕೆ ಸ್ಥಳವಿಲ್ಲ. ಆದುದರಿಂದ ಒಬ್ಬನ ಶ್ರದ್ಧೆಯು ಇನ್ನೊಬ್ಬನ ಚರ್ಚಾ

ವಿಷಯುವಾಗದು. ಅನುಕರಣೀಯವೂ ಆಗದು. ಉಪಕಾರಿಯೂ ಆಗದು. ಶ್ರದ್ಧೆಯುಳ್ಳವನು ಸಮುದ್ರವನ್ನು ಹಾರಬಲ್ಲನು. ಆದರೆ, ಅಂಧಾನುಕರಣ ಮಾಡುವವನು ನಡುವಿನಲ್ಲೇ ಮುಳುಗುವನು! ಆದುದರಿಂದಲೇ ಶ್ರೀಕೃಷ್ಣ ಚಂದ್ರನು 'ಯೋ ಯಚ್ಛ್ರದ್ಧಃ ಸ ಏವಸಃ' ಎಂದಿರುವನು. ಶ್ರದ್ಧೆ ಮತ್ತು ಬುದ್ಧಿಯ ಕ್ಷೇತ್ರವು ಒಂದಲ್ಲ, ಬೇರೆ ಬೇರೆ. ಶ್ರದ್ಧೆಯಿಂದ ಅಂತರ್ಜ್ಞಾನ ಆತ್ಮಜ್ಞಾನವು ಹೆಚ್ಚುವುದು. ಶ್ರದ್ಧೆಯು ಅಂತಃಶುದ್ಧಿಯನ್ನುಂಟುಮಾಡು ವುದು. ಅತೀ ಬುದ್ಧಿಶಾಲಿಗಳ ಚರಿತ್ರವು ಭ್ರಷ್ಟವಾಗಿರಬಹುದು. ಆದರೆ, ಶ್ರದ್ಧೆಯೊಡನೆ ಚರಿತ್ರಭ್ರಷ್ಟತೆಯಿರುವುದು ಅಸಂಭವು. ಒಬ್ಬ ಬಾಲಕನು ಶ್ರದ್ಧೆಯ ಪರಾಕಾಷ್ಟೆಯನ್ನು ಹೊಂದಬಹುದು. ಆದರೆ ಆತನ ಬುದ್ಧಿ ಬಲವು ಅಷ್ಟು ಮುಂದುವರಿಯದು. ಇಂತಹ ಶ್ರದ್ಧೆಯನ್ನು ಸಂಪಾದಿಸು ವುದರ ಸುಲಭ ಮಾರ್ಗವನ್ನು ಶ್ರೀರಾಮಚರಿತ ಮಾನಸ, ಶ್ರೀಭಗವದ್ಗೀತೆ ಮೊದಲಾದುವುಗಳಿಂದ ಕಂಡು ಹಿಡಿಯಬಹುದು. ಭಕ್ತಿಯಿಂದ—ಸತ್ಸಂ ಗತಿಯಿಂದ ಶ್ರದ್ಧೆಯು ಲಭಿಸುವುದು. 'ಸತ್ಸಂಗತಿಃ ಕಥಯ ಕಿಂ ನ ಕರೋತಿ ಪುಂಸಾಂ.'

ಗೋ:-ಶ್ರದ್ಧೆಯ ರಹಸ್ಯವು ತಿಳಿದಂತಾಯಿತು. ಇಂದಿನ ದಿನಗಳಲ್ಲಿ ತಾವು ಮಾಡುವ ಉಪದೇಶವು ಸತ್ಯ-ಅಹಿಂಸೆಗಳೆಂಬ ನೆಲಗಟ್ಟನ್ನಾಶ್ರ ಯಿಸಿಕೊಂಡಿದೆ. ಅದೇನೊ ಸರಿ. ಆದರೆ, ತಾವು ಜನತೆಗೆ ಬೋಧಿಸುವ ಸತ್ಯ—ಅಹಿಂಸೆಗಳನ್ನು ಉಪಾಸನಾಕ್ರಮದಿಂದ ಏಕೆ ಉಪದೇಶಿಸುವುದಿಲ್ಲ? ಉಪಾಸನೆಯು ಯಾವ ಭಾಷಾಬದ್ಧವಾಗಿಯೂ ಇರಲಿ. ಆದರೆ, ಇದೊಂದು ಸುಲಭ ಉಪಾಯವೆಂದು ನನ್ನ ತಿಳುವಳಿಕೆ.

ನೋ:—ಸತ್ಯ ಮತ್ತು ಅಹಿಂಸೆಯ ತತ್ವ ಯಾ ಸಿದ್ಧಾಂತವು ಸರ್ವವ್ಯಾಪಕವಾದುದು. ಉಪಾಸನೆಯು ಮನುಷ್ಯಕೃತ ಸಾಧನವೊಂದು ಮಾತ್ರ. ಆದುದರಿಂದ ಅದು ದೇಶಕಾಲ ಪರಿಮಿತವಾಗಿದೆ. ಅದರಲ್ಲಿ ವೈವಿಧ್ಯವಿದೆ. ಇರುವ ಅಗತ್ಯವೂ ಇದೆ. ಅದರ ಅಂತಿಮ ಸಾರವು ಒಂದೇ ಆಗಿದೆ. ಅದು ಜನತೆಯ ಕೆಲಸವಲ್ಲದೆ, ನಾನು ನನ್ನ ತತ್ವಗಳಿಗೆ ಉಪಾಸನೆಯ ಪೋಷಾಕನ್ನು ತೊಡಿಸಬೇಕಾಗಿಲ್ಲ.

ಗೋ:—ಗುರುವರ, ನಾನು ಪ್ರಶ್ನಿಸುತ್ತ ಹೋದಂತೆ ನನ್ನ ಸಂದೇಹಗಳೂ ಮುಂದಡಿ ಇಡುತ್ತಲಿವೆ. ಕೇಳಿದುದರ ತತ್ವಬೋಧವು ಆಗುತ್ತಿರುವುದರಿಂದಲೇ ಸಂದೇಹಗಳೂ ಮುಂದುವರಿಯಲು ಧೈರ್ಯಗೊಳ್ಳುತ್ತಲಿವೆ. ಈಗ ನಾನು ಪುನಃ ಕೆಲವು ಪ್ರಶ್ನೆಗಳನ್ನು ಕೇಳುವೆನು. (1) ಇಂದು ಧರ್ಮದ ಹೆಸರಲ್ಲಿ ಎಂತೆಂತಹ ಅನರ್ಥಗಳಾಗುತ್ತಿವೆ. ಅಲ್ಪಅಲ್ಪ ವಿಷಯಗಳಲ್ಲೂ ಧರ್ಮಪ್ರಾಮಾಣ್ಯವು ಮಿತಿಮೀರಿದೆ. ಆದರೆ, ಎಷ್ಟೋ ಜನರಿಗೆ ಧರ್ಮದ ತಿರುಳೇ ಗೊತ್ತಿಲ್ಲ. ಇದರ ಕಾರಣವು ಧಾರ್ಮಿಕ ಶಿಕ್ಷಣದ ಅಭಾವವಲ್ಲವೇ?

(2) ಮಾನವನ ಆತ್ಮಕ್ಕೆ ಯಾವ ಸಾಧನದಿಂದ ಶಾಂತಿಯು ಸಿಗಬಲ್ಲುದು? (3) ಪಾಪ ಮಾಡಿದರೆ ಪ್ರಾಯಶ್ಚಿತ್ತಮಾಡಿದರಾಯಿತು, ಪಾಪವು ಹೊರಟುಹೋಗುವುದು ಎನ್ನುವುದು ಲೋಕರೂಢಿಯು. ಆದರೆ, ಪ್ರಾಯಶ್ಚಿತ್ತದಿಂದ ಪಾಪಕ್ಷಯವಾದೀತೇ? ಪ್ರಾಯಶ್ಚಿತ್ತದ ಯಥಾರ್ಥ ಸ್ವರೂಪವು ಯಾವುದು? (4) ಮನುಷ್ಯಜೀವನದ ಉದ್ದೇಶ ಮತ್ತು ಕರ್ತವ್ಯವೇನು?

ನೋ:—(1) ದೇಶದಲ್ಲಿಂದು ಧಾರ್ಮಿಕ ಶಿಕ್ಷಣದ ಅಭಾವವಿದೆಯೆನ್ನುವುದು ನಿಜ. ಧಾರ್ಮಿಕ ಶಿಕ್ಷಣವನ್ನು ಧರ್ಮಾಚರಣದ ಮೂಲಕವೇ ಕೊಡಬೇಕು. ಶುಷ್ಕಪಾಂಡಿತ್ಯದಿಂದ ಆ ಕೆಲಸವಾಗದು. ಸತ್ಸಂಗತಿಯೇ ಧರ್ಮದ ಮೂಲ. ಧಾರ್ಮಿಕ ಗ್ರಂಥಪಠನವೂ ಅನಾವಶ್ಯಕವೆಂದು ನನ್ನ ಮತವಲ್ಲ. ಆದರೆ, ಮೊದಲು ಸತ್ಸಂಗತಿಯಿಂದ ಪರಿಶುದ್ಧಿಗೊಳ್ಳಬೇಕು. ಮೊದಲೇ ಪುಸ್ತಕ ಪಠನಕ್ಕೆ ಶುರುಮಾಡಿದರೆ, ಶಾಂತಿಪ್ರದವಾಗುವ ಬದಲು ಬಾಲಕನಿಗೆ ಬಂಧನಕಾರಿಯಾಗದಿರದು. ತಿಳುವಳಿಕೆಯುಳ್ಳ ಮಾನವನು ಊರಲ್ಲಿಲ್ಲದ ರಗಳೆಗಳಿಗೆ ಹೋಗದೆ, ಸ್ವತಃ ಧರ್ಮಪಾಲನವನ್ನು ಮೊದಲು ಮಾಡಬೇಕು. ನಂತರ 'ಯಥಾ ಪಿಂಡೇ ತಥಾ ಬ್ರಹ್ಮಾಂಡೇ' ಎಂಬಂತೆ ಒಬ್ಬನ ಆಚರಣದ ಪ್ರಭಾವವು ಬೇರೆಯವರ ಮೇಲೆಯೂ ಬೀಳದಿರದು. ಎಲ್ಲರೂ ತಮ್ಮ ತಮ್ಮ ಚಿಂತೆಯನ್ನು ಗಮನಿಸ ತೊಡಗಿದರೆ, ಇನ್ನೊಬ್ಬನಿಗಾಗಿ ಯಾರೂ ದಣಿಯಬೇಕಾಗಿಲ್ಲ.

(2) ಸಾಧು ಜೀವನದಿಂದಲೇ ಆತ್ಮಶಾಂತಿಯು ಸಿಗಬಹುದು. ಸಾಧುಜೀವನವೆಂದರೆ ಸತ್ಯ-ಅಹಿಂಸಾಮಯ ದೈನಿಕ ಆಚರಣವು; ಸಂಯಮ ಯುಕ್ತ ವ್ಯವಹಾರವು. ಭೋಗವು ಎಂದೂ ಧರ್ಮವಾಗದು. ಧರ್ಮದ ಮೂಲವು ತ್ಯಾಗದಲ್ಲಿದೆ. (3) ತಾನು ಮಾಡಿದ ಪಾಪಪರಿಹಾರಕ್ಕಾಗಿ ಪ್ರಾಯಶ್ಚಿತ್ತ ಹೊಂದುವುದು ಶಕ್ಯ ಮತ್ತು ಕರ್ತವ್ಯವು. ಪ್ರಾಯಶ್ಚಿತ್ತದ ಅರ್ಥವು ಶುಷ್ಕ ವಿನಂತಿ-ಪ್ರಾರ್ಥನೆಗಳಲ್ಲ. ದಾನ-ಭೋಜನಗಳೂ ಅಲ್ಲ. ರೋದನವು ಅಲ್ಲವೇ ಅಲ್ಲ! ಅರ್ಥಶೂನ್ಯ ಉಪವಾಸಗಳಿಂದಲೂ ಪಾಪ ಪರಿಹಾರವಾಗದು. ಪಶ್ಚಾತ್ತಾಪವೇ ಯಥಾರ್ಥ ಪ್ರಾಯಶ್ಚಿತ್ತವು. ಮುಂದೆಂದೂ ದುಷ್ಕೃತ್ಯ ಮಾಡದಿರುವ ಪ್ರತಿಜ್ಞೆಯೇ ನಿಜವಾದ ಪ್ರಾಯ ಶ್ಚಿತ್ತ. ಇದರಿಂದ ಪಾಪಕ್ಷಯವು ಸ್ವಲ್ಪವಾದರೂ ಆಗಬಹುದು. ಆದರೆ, ಪ್ರಾಯಶ್ಚಿತ್ತವನ್ನೂ ಮಾಡದೆ ಇದ್ದರೆ ಚಕ್ರಬಡ್ಡಿಯೊಡನೆ ಅದು ಬೆಳೆಯು ತ್ತಲೇ ಇರುವುದು. ಪ್ರಾಯಶ್ಚಿತ್ತ ಮಾಡಿದರೆ ಬಡ್ಡಿಯ ಬೆಳವಣಿಗೆಯಷ್ಟು ಇಲ್ಲವುದು. (4) ಮನುಷ್ಯ ಜೀವನದ ಉದ್ದೇಶವು ಆತ್ಮಶಾಂತಿಯು. ಅದರ ಸಿದ್ಧಿಯ ಏಕಮಾತ್ರ ಉಪಾಯವು 'ಪಾರಮಾರ್ಥಿಕ ಭಾವನೆಯಿಂದ ಜೀವಮಾತ್ರದ ಸೇವೆಮಾಡುವುದು. ಅದರಲ್ಲಿಯೇ ತನ್ಮಯತೆ ಮತ್ತು ಅದ್ವೈತ ದರ್ಶನವನ್ನು ಹೊಂದಬೇಕು!'

ಗೋ:— ಗುರುವರ್ಯ! ಈಗ ನಾನು ವಿವಾಹ ಮತ್ತು ವಿವಾಹವಿಧಿಯ ವಿಚಾರದಲ್ಲಿ ತಿಳಿಯಲಾಶಿಸುವೆನು. ವಿವಾಹದ ಕಲ್ಪನೆಯ ವಿಚಾರದಲ್ಲಿ ಮತಗಳು ಎರಡಿಲ್ಲ. ಪ್ರಶ್ನೆ ಮಾತ್ರ ಎರಡಿವೆ. (1) ಶಾಸ್ತ್ರವಚನ ಎಂದರೆ ಮಂತ್ರಗಳ ಅರ್ಥವನ್ನು ಏನೆಂದು ಮಾಡಬೇಕು. (2) ವಿವಾಹ ವಾಗುವ ವಧೂವರರ ಮುಂದೆ ಯಾವ ಆದರ್ಶವನ್ನಿಡಬೇಕು? ನನ್ನ ತಿಳು ವಳಿಕೆಯಂತೆ ವಿವಾಹದ ಉದ್ದೇಶಕ್ರಮವು ಕೆಳಗಿನಂತಿರಬೇಕು.

(1) ಪರಸ್ಪರ ಪ್ರಾಕೃತಿಕ ಆಕರ್ಷಣ; (2) ವಿಷಯೇಚ್ಛೆ; (3) ಸಹ ಜೀವನ ಮತ್ತು ಪರಸ್ಪರಾವಲಂಬನ; (4) ಧಾರ್ಮಿಕ-ವ್ಯವಹಾರಿಕ ಸಹ ಯೋಗ; (5) ಸಂತಾನೋತ್ಪತ್ತಿ; (6) ಆತ್ಮೋನ್ನತಿ ಯಾ ಮೋಕ್ಷಸಾಧನೆ ಯಲ್ಲಿ ಅನ್ಯೋನ್ಯ ಸಹಾಯ ಮತ್ತು ಹೃದಯದ ಅಭಿನ್ನತೆ. ಒಬ್ಬನ

ಇನ್ನೊಬ್ಬನ ಕುರಿತಾಗಿರುವ ಏಕನಿಷ್ಠೆಯೇ ವಿವಾಹದ ಮುಖ್ಯ ಸ್ವರೂಪವು. ವಿವಾಹದ ಮುಖ್ಯ ಸಂಬಂಧವು ವಿಷಯ ಮತ್ತು ತತ್ಫಲಸ್ವರೂಪ ಸಂತತಿ ಯೊಡನಿದೆ. ಈ ಉದ್ದೇಶವಿಲ್ಲದಿದ್ದರೆ ಬ್ರಹ್ಮಚರ್ಯದಿಂದಲೇ ಇರುವು ದೊಳಿತು. ವಿಷಯೇಚ್ಛೆಯು ವಿವಾಹದ ಮೂಲಕಾರಣ ಯಾ ಪ್ರೇರಕ ವಾಗಿರಲಿ. ಆದರೆ, ವಿವಾಹದ ಧರ್ಮಾನುಮೋದಿತ ಸಾರ್ಥಕತೆಯು ಸಂತಾನೋತ್ಪತ್ತಿಯಲ್ಲಿದೆ. ಸಂತಾನಲಾಲಸೆಯಿಲ್ಲದಿದ್ದರೆ, ವಿವಾಹದ ಅಗತ್ಯವಿಲ್ಲ. ಆತ್ಮೀಕ—ಸಾತ್ವಿಕ ಸಂಬಂಧವೇ ವಿವಾಹದ ಕಾರಣವೆನ್ನು ವವರು ವಿವಾಹವನ್ನೇಕೆ ಮಾಡಬೇಕು? ಮಾಡುವ ಕಾರಣವಾಗಲಿ, ಅಧಿಕಾರವಾಗಲಿ ಅವರಿಗಿಲ್ಲ. ಸಂತಾನೋತ್ಪತ್ತಿಯ ಇಚ್ಛೆಯಿರುವ ತನಕ ಪರಸ್ಪರ ಸಂಬಂಧವು ಧರ್ಮ್ಯ ಮತ್ತು ಉದಾತ್ತವು! ಆದರೆ ಶುದ್ಧ ಆಧ್ಯಾ ತ್ಮಿಕವಲ್ಲ. ಸಂತತಿಯ ವಾಸನೆಯೇ ಇಲ್ಲವಾದರೆ, ವಿವಾಹಸಂಬಂಧವಿರ ಲಾಗದು. ಹಾಗೆಂದು ಸಹಜೀವನವು ನಿಂದ್ಯವಲ್ಲ. ಅರ್ಥಾತ್ ಆಗ ಆ ಸ್ತ್ರೀಪುರುಷರ ಜೀವನ ಸಂಬಂಧವು ಆಧ್ಯಾತ್ಮಿಕವಾತ್ರವಾಗಿರಬೇಕು.

ನನ್ನೀ ವಿಚಾರಸರಣಿಯು ಯುಕ್ತವಾದಲ್ಲಿ, ಸಂತಾನೋತ್ಪತ್ತಿ ರೂಪ ವಿಹಾಹದ ಮುಖ್ಯ ಮತ್ತು ನಿರ್ಣಾಯಕ ಹೇತುವಿಗೆ 'ಪ್ರತಿಜ್ಞೆ'ಯಲ್ಲಿ ಸ್ಥಾನವಿರಬೇಕು. 'ಸಂತತಿಯ ಹೊರತು ಗೃಹಸ್ಥಾಶ್ರಮವು ಅಮಂಗಲವು. ಸಂತತಿಶೂನ್ಯರಿಗೆ ಗತಿಯಿಲ್ಲವು' ಇತ್ಯಾದಿ ಪ್ರಾಚೀನೋಕ್ತಿಗಳನ್ನು ಮನ್ನಿಸ ದಿದ್ದರೂ, ವಿಹಾಹದ ಮುಖ್ಯ ಉದ್ದೇಶವನ್ನು ಬಿಡಲಾಗುವುದಿಲ್ಲ.

'ಸಪ್ತಪದಿ'ಯ ಪ್ರತಿಯೊಂದು ಪ್ರತಿಜ್ಞೆಯೂ ಸ್ವಾಭಾವಿಕ ಮತ್ತು ಸಾತ್ವಿಕವಾಗಿದೆ. ಸರಳವೂ ಆಗಿದೆ. ಪ್ರತಿಯೊಂದು ಶಬ್ದವನ್ನೂ ಆಧ್ಯಾ ತ್ಮಿಕ ರೀತ್ಯಾ ಅರ್ಥಮಾಡುತ್ತಹೋದರೆ, ಸತ್ಯವನ್ನು ಪಾಲಿಸಿದಂತಾಗದು. ವ್ಯಾವಹಾರಿಕ ಮತ್ತು ಮೂಲಭೂತವಾದ ಸಂಕುಚಿತ ಅರ್ಥವನ್ನು ಮರೆ ಯುವುದು ನ್ಯಾಯವಲ್ಲ.

ವಿವಾಹ ಸಂಬಂಧವು ಮರಣಪರ್ಯಂತವೂ ಸ್ಥಿರವಾಗಿರಬೇಕೆಂಬು ದೇನೂ ಮಾನ್ಯವಲ್ಲ. ಆದರೆ ಮುಮುಕ್ಷೇಚ್ಛೆಯು ಉಂಟಾಗುವ ತನಕ ಅದು ಇದ್ದೇ ಇರಬೇಕು. ಮುಮುಕ್ಷೇಚ್ಛೆಯು ತೀವ್ರವಾದರೆ, ವೈವಾಹಿಕ

ಸಂಬಂಧವು ಉಳಿಯುವುದೇ ಇಲ್ಲ. 'ಸಪ್ತಪದಿ'ಯಲ್ಲಿ ಸಂತಾನೋತ್ಪಾದನದ ಉಲ್ಲೇಖವಿಲ್ಲದಿರುತ್ತಿದ್ದರೂ ಅದನ್ನು ಸೇರಿಸಬೇಕೆಂಬ ಆಗ್ರಹವು ಉಂಟಾಗದೆ ಇರುತ್ತಿದ್ದಿಲ್ಲ. ಪುತ್ರೇಷಣೆಯ ಕಾರಣದಿಂದಲೇ ದಾಂಪತ್ಯ ಸಂಬಂಧವು ಧರ್ಮದೃಷ್ಟ್ಯಾ ಪವಿತ್ರವಾಗುವುದು. ಇದರಿಂದಲೇ ಪರಸ್ಪರ ನಿಷ್ಠೆ, ಸಂಯಮ ಪಾಲನಗಳುಂಟಾಗುವುವು. ಇನ್ನೂ ಪ್ರಸಂಗ, ಹೇತು, ಸಮೀಪದ ಮಂತ್ರಗಳು ಯಾವುದಾದರಿನ್ನೊಂದು ಅರ್ಥವನ್ನು ಸಮರ್ಥಿಸುತ್ತವೆಂತಾದರೆ, ಪರಂಪರೆಯಲ್ಲೂ ಏಕವಾಕ್ಯತೆಯಿದ್ದರೆ, ಇತಿಹಾಸದಿಂದಲೂ ಪುಷ್ಟಿಸಿಗುತ್ತಲಿದ್ದರೆ, ಮನಸ್ಥಿತಿಯ ಕಾರಣ, ಪುರಾತನ ಮಂತ್ರಗಳ ಅರ್ಥವನ್ನು ಬದಲುಮಾಡುವುದಕ್ಕಿಂತ, ಸಾಧಾರವಾಗಿ ಮಂತ್ರವ್ಯತ್ಯಾಸ ಮಾಡುವುದೇ ರಾಜಮಾರ್ಗವು. 'ಪ್ರಜಾಭ್ಯಃ' ಎಂಬ ನಾನಾ ವಿಧಾರ್ಥಕ ಶಬ್ದದ ಬದಲು 'ಸರ್ವಭೂತಹಿತಾರ್ಥಾಯ'ವೆಂಬ ಸರಳ ಪರಿವರ್ತನವೇ ಬುದ್ಧಿಗಮ್ಯವು!

ಯಾವುದಾದರೊಂದು ಮಂತ್ರದ ಅರ್ಥವು ದ್ವಿವಿಧವಾಗುತ್ತಲಿದ್ದರೆ ನೀತಿಪೋಷಕವಾದ್ದನ್ನೇ 'ಗೃಹೀತ'ವೆಂದು ತಿಳಿಯಬೇಕು. ಸಂದಿಗ್ಧವಾಗಿದ್ದರೆ, ಅನೀತಿಪೂರ್ಣ ಅರ್ಥದ ಸಂಭವವಿದ್ದು ಜನತೆಯಲ್ಲಿ ಅನರ್ಥದ ಕಲ್ಪನೆಯುಂಟಾಗುವಂತಿದ್ದರೆ, ಶಬ್ದವ್ಯತ್ಯಾಸಮಾಡುವುದೇ ಹಿತಕರವು. ನನ್ನ ಕಲ್ಪನಾನುಸಾರವಾಗಿ ವೈವಾಹಿಕ ಪ್ರತಿಜ್ಞೆಯಲ್ಲಿ ಸಂತಾನೋತ್ಪತ್ತಿಗೆ ಸ್ಥಾನ ಸಿಗಲೇ ಬೇಕು. ಅದಿಷ್ಟವಲ್ಲದಿದ್ದರೆ, ಪುರಾತನ ಶಬ್ದ ಪ್ರಜಾಭ್ಯಃ (ವ್ಯಾಕರಣ ರೀತ್ಯಾ ಇನ್ನೊಂದು ವ್ಯಾಪಕ ಅರ್ಥವಾಗುವುದಾದರೂ) ತೆಗೆದು ಯಾವುದಾದರೂ ಇನ್ನೊಂದು ಶಬ್ದವನ್ನು ಇಡಬೇಕು. ಇಲ್ಲದಿದ್ದರೆ ವೇದಾಂತಿಗಳು ಮಾಡುವ ಅರ್ಥವೊಂದು! ವಿಲಾಸಿಗಳು ಮಾಡುವುದಿನ್ನೊಂದು! ಜನತೆಯು ತಿಳಿಯುವುದು ಬೇರೊಂದು!!

ವಿವಾಹ ಪ್ರತಿಜ್ಞೆಯಲ್ಲಿ ಚತುರ್ವಿಧ ಪುರುಷಾರ್ಥದ ಅರ್ಥಾತ್ ಜೀವನದ ಆದರ್ಶಗಳ ಏಕರೂಪತೆಯ ಸಂಕಲ್ಪವನ್ನು ಸೇರಿಸಿದರೆ ಅತ್ಯುತ್ತಮವು.

ವಿವಾಹವೆಂಬುದೊಂದು ಸಾಮಾಜಿಕ ಸಂಬಂಧವಾದುದರಿಂದ ಅದರಲ್ಲಿಯೇ ಸಮಾಜದ ನೆಲಗಟ್ಟಿರುವುದೆಂಬುದನ್ನು ವಿವಾಹವಿಧಿಯಲ್ಲಿಯೇ ತೋರ್ಪಡಿಸಿರಬೇಕು.

ಪಂಚಯಜ್ಞಗಳ ಸತತ ಆಚರಣೆಯೇ ವಿವಾಹದ ಯೋಗ್ಯತೆಯನ್ನೂ ನಂತರ, ವಿವಾಹದ ಸಾರ್ಥಕತೆಯನ್ನೂ ಉಂಟುಮಾಡುವುದೆಂಬುದು ವಧೂವರರ ಮೆದುಳಲ್ಲಿರಬೇಕು. ಪಂಚಯಜ್ಞಗಳೆಂದರೆ, (1) ವೃಕ್ಷಸೇವೆ. (2) ಜಲಾಶಯಶುದ್ಧಿ. (3) ಗೋಪಾಲನ. (4) ಸೂತ್ರಕರ್ತನ. (5) ಮತ್ತು ವಿದ್ಯಾಧ್ಯಯನವೇ ನನ್ನ ತಿಳುವಳಿಕೆಯ ಉತ್ತಮ ಯಜ್ಞ ಪಂಚಕವು!

'ದಾನ'ವು ಗೃಹಸ್ಥನ ಮುಖ್ಯ ಮತ್ತು ಅಪರಿಹಾರ್ಯವಾದ ಕರ್ತವ್ಯವಾದುದರಿಂದ ಪ್ರತ್ಯೇಕ ವಿವರಿಸಬೇಕಾಗಿಲ್ಲವಷ್ಟೆ! ನನ್ನೀ ವಿಚಾರ ಸರಣಿಯಲ್ಲಿ ಅಪೇಕ್ಷಿತ ಸಂಶೋಧನವಿರುವುದಾದರೆ ಅದ್ಯಾವುದು?

ನೋ:— ಇದು ನಿಜವಾಗಿಯೂ ಪ್ರಶ್ನೆ ಯಾ ಸಂದೇಹವೆನ್ನಿಸಿಕೊಳ್ಳುವುದಿಲ್ಲ. ಇದೊಂದು ಉಪದೇಶ. ಶಾಸ್ತ್ರವಾಕ್ಯದ ವ್ಯಾಖ್ಯೆಯು. ನಿನ್ನ ವಿಚಾರದ ಅಧಿಕಾಂಶದಲ್ಲಿ ನಾನು ಸಹಮತನೇ ಆಗಿದ್ದೇನೆ. ಇರುವ ಮತಭೇದ ಎರಡೇ ಮಾತುಗಳಲ್ಲಿ ಇರಬಹುದು! 'ಇರಬಹುದು' ಎಂಬ ಸಂದೇಹದ್ಯೋತಕ ಶಬ್ದದಿಂದ ಅಚ್ಚರಿಗೊಳ್ಳುವ ಕಾರಣವಿಲ್ಲ. ವಸ್ತುವು ಯಾವಾಗಲೂ ಒಂದೇ ಇರುತ್ತದೆ. ಆದರೆ, ಪ್ರೇಕ್ಷಕನ ದೃಷ್ಟಿಭೇದದಿಂದ ವಸ್ತುಭೇದವೂ ಭಾಸವಾಗುವ ಸಂಭವವು ಇದ್ದೇ ಇದೆ.

ನನ್ನ ವಿಚಾರದಲ್ಲಿ 'ಸಂತಾನೋತ್ಪಾದನ'ದ ಭಾವನೆಗೆ 'ವಿವಾಹ ಪ್ರತಿಜ್ಞೆಯಲ್ಲಿ ಎಡೆಯಿರಬೇಕೆಂದೆನಿಸುವುದಿಲ್ಲ. ನನ್ನ ಅನುಭವದಲ್ಲಿ ಹಲವು ಉದಾಹರಣೆಗಳಿವೆ. ಎಷ್ಟೋ ಸ್ತ್ರೀ-ಪುರುಷರು ವಿಷಯಭೋಗದಲ್ಲಿ ಆಶೆಯನ್ನಿಡದೆ ದಾಂಪತ್ಯಜೀವನವನ್ನು ಸ್ವೀಕರಿಸಿ ಆಧ್ಯಾತ್ಮಿಕಜೀವನವನ್ನು ಕಳೆಯುತ್ತಿರುವರು.

ನಾನು, ಭಾರತದೊಳಗಿನ ಎಷ್ಟೋ ಭಗಿನಿಯರು ಲೋಕಾಪವಾದದ ಭೀತಿಯಿಂದ, ಅಥವಾ 'ಅಬಲಾತ್ವ'ದ ಕಾರಣದಿಂದ ವಿವಾಹವಾಗಿ ಸ್ತ್ರೀ-ಪುರುಷರಿಬ್ಬರೂ ನಿರ್ವಿಷಯವಾದ ಸಹಜೀವನವನ್ನು ಆಚರಿಸುತ್ತಿರುವುದನ್ನು ನೋಡಿರುವೆನು.

ವಿಧುರರ ಮಾತು ಬೇರೆ. ತಮ್ಮ ಮನೆಗೆಲಸಕ್ಕೆಂದು, ಯಾ ಮೊದ ಲಿನ ಪತ್ನಿಯ ಮಕ್ಕಳನ್ನು ಪಾಲಿಸಲಿಕ್ಕೆಂದು ಜೀವನ ಸಹಚಾರಿಣಿಯನ್ನು ಹುಡುಕಿಕೊಳ್ಳುವರು! ಸಂಯಮಿಾ ಜೀವನವನ್ನು ಕಳೆಯುವ ಜಗತ್ತಿನ ಪ್ರವಾಹವು ಈ ದಿನಗಳಲ್ಲಿ ವಿವಾಹವು ಪ್ರಜೋತ್ಪಾದನೇಚ್ಛೆಯಿಂದ ಪ್ರಥಕ್ ಎಂದು ತಿಳಿಯುವ ಕಡೆಗೆ ಹರಿಯುತ್ತಲಿದೆ. ಸ್ತ್ರೀ-ಪುರುಷರಂತಹ ಭಿನ್ನ-ಭಿನ್ನ ಲಿಂಗಧಾರೀ ವ್ಯಕ್ತಿಗಳ ಜೊತೆಯು ಸಂತಾನೋತ್ಪಾದನೆಗಾಗಿಯೇ ಇರುವುದೆಂದು ನಾನು ಒಪ್ಪುವಂತಿಲ್ಲ! ದಂಪತಿ ಪ್ರೇಮದ ನಿರ್ಮಲತೆಯಲ್ಲಿ ಪ್ರಾಣಿಮಾತ್ರದ ಅಭಿನ್ನಹೃದಯತೆಯೇ ಕಾರಣವೇಕಾಗಿರಬಾರದು? ಇಂದು ಅಸಂಭವದಂತಿರುವಂತಹುದು ನಾಳೆಯೇ ಸಂಭವಿಸಬಹುದು! ಸಂಯಮದ ಸೀಮೆಯನ್ನು ಅರಿತವರಾರಿರುವರು? ಮನುಷ್ಯೇತರರ ಉದಾಹರಣವನ್ನಾಧ ರಿಸಿ ಮನುಷ್ಯನ ಉನ್ನತಿಯನ್ನು ಅಳೆಯುಬಾರದು!

ನನ್ನ ಮನದಲ್ಲಿರುವ ಭಾವನೆಯು ಇನ್ನೊಂದು. ಇದು 'ಸಪ್ತಪದಿ'ಯ ಪ್ರತಿಜ್ಞೆಯಲ್ಲಿ ಸಂತಾನೋತ್ಪಾದನಕ್ಕೆ ಸ್ಥಾನವಿರಬಾರದು. ಅವಿರೋಧ ವಾಗಿ ನಡಿಯುವ ಪ್ರವೃತ್ತಿಗೆ ಪ್ರತಿಜ್ಞೆಯ ಆಡಂಬರವೇಕೆ? ಸಂತಾನೋ ತ್ಪಾದನವು ಕರ್ತವ್ಯವೆಂದು ತಿಳಿಯದಿದ್ದರೂ ಅದಾಗುವುದು ಅಸಾಧ್ಯವಲ್ಲ! ಆದುದರಿಂದ ಈ ಸಂಬಂಧದಲ್ಲಿ ಪ್ರತಿಜ್ಞೆಯ ಆವಶ್ಯಕತೆ ಇದ್ದೇ ಇದೆ ಯೆಂತಾದರೆ ಇಂತಿರಬೇಕು,—'ನಾವು ರತಿಸುಖವನ್ನು ರತಿಸುಖಕ್ಕಾಗಿ ಭೋಗಿಸಲಾರೆವು. ಸಂತಾನದ ಭರಣ-ಪೋಷಣದ ಭಾರವನ್ನು ವಹಿಸುವ ಯೋಗ್ಯತೆಯಲ್ಲಿ ನಮ್ಮ ವಿಶ್ವಾಸವುಂಟಾದ ನಂತರವೇ, ಸಂತಾನೋತ್ಪತ್ತಿ ಗಾಗಿ, ನಾವು ವಿಷಯಸುಖವನ್ನು ಅನುಭವಿಸುವೆವು'. ಇದರ ಮತ್ತು ನಿನ್ನ ತಿಳುವಳಿಕೆಯ ಪ್ರತಿಜ್ಞೆಯಲ್ಲಿರುವ ಅಂತರವು ನಿನ್ನ ಗೋಚರಕ್ಕೂ ಬಾರ ದಂತಹುದೇನೂ ಅಲ್ಲ!

ವಿವಾಹದ ಮುಖ್ಯೋದ್ದೇಶವೇ ಸಂತಾನೋತ್ಪಾದನವಾಗಬೇಕೆಂತಾ ದರೆ ಆಗಿನ ಜನತೆಯು ಅದನ್ನು ಸುಧಾರಿಸಬಲ್ಲುದು. ಇಂದು ಫ್ರಾನ್ಸ್ ನಲ್ಲಿ ಇದೇ ಯುಗ! ಫ್ರಾನ್ಸಿನ ಜನತೆಯು ಅನಿಯಂತ್ರಿತವಾಗಿ ವಿಷಯ ಲಾಲಸೆಯಿಂದ ಸಂತಾನೋತ್ಪತ್ತಿಯನ್ನು ಕೃತ್ರಿಮ ರೀತಿಯಲ್ಲಿ ನಿಯಂತ್ರ

ಸಿತು. ಇದರ ಪರಿಣಾಮವು ವಿಷಮಯವೇ ಆಯಿತು. ಜನನದ ಸಂಖ್ಯೆಗಿಂತ ಮರಣಸಂಖ್ಯೆಯು ಹೆಚ್ಚ ತೊಡಗಿತು. ಆದುದರಿಂದ ಅಲ್ಲಿ ಇಂದು ಸಂತಾನಶಾಸ್ತ್ರವನ್ನು ಜನತೆಗೆ ಕಲಿಸುವರು-ಅಲ್ಲಿಯ ಸಮಾಜದ ಕರ್ಣಧಾರರು! ಉದಾಹರಣೆಯಲ್ಲಿ ವಿಷಯಭೋಗದ ಅತಿಶಯವಿದೆ.

ಯುದ್ಧ ಪ್ರಸಂಗಾನಂತರ, ಪುರುಷರ ಸಂಖ್ಯೆಯು ಕಮ್ಮಿಯಾದಾಗ ಬಹುವಿವಾಹವೂ ಧಾರ್ಮಿಕವೆಂದೆಣಿಸಲ್ಪಡುತ್ತದೆ. ಈ ಉದಾಹರಣೆಯಲ್ಲಿ ಮಾನವ ಹಿಂಸೆಯು ಎಲ್ಲೆ ದಾಟಿದೆ!

ಯುಗಧರ್ಮವನ್ನು ಅನುಸರಿಸಿಯೇ ಧರ್ಮಾಧರ್ಮಗಳ ನಿರ್ಣಯವಾಗುತ್ತದೆ. ವಾಸ್ತವಿಕ ಧರ್ಮವಾದರೋ ತದ್ವಿಪರೀತವಾಗಿಯೇ ಇದೆ. ನೋಡಿರಿ! 'ನೀವು ವಿಷಯಭೋಗದ ಎಲ್ಲೆಯನ್ನು ಮೀರಿದಿರಿ. ಇನ್ನು ನಷ್ಟರಾಗಿರಿ! ನೀವು ಪಶುಗಳಿಗಿಂತಲೂ ನೀಚಕರ್ಮವೆನ್ನೆಸಗಿದಿರಿ! ಪರಸ್ಪರ ಹಿಂಸೆಯಿಂದ ಸಮಾಜವನ್ನು ಧ್ವಂಸಗೊಳಿಸಿದಿರಿ. ಈಗ ಉಳಿದಿರುವವರೂ ಸತ್ತು ಹೋಗಿರಿ!' ಎಂದೇ ಸತ್ಯಧರ್ಮದ ಧ್ವನಿಯಾಗಿರಬೇಕಾಗಿತ್ತು. ಈ ವಿವಿಧ ನಾಶದಲ್ಲಿ ಜಗತ್ತಿನ ಹಿತವಿದೆ. ಇದರಿಂದ ಕರ್ಮಫಲದ ಸ್ಪಷ್ಟ ಉದಾಹರಣೆಯು ಜಗತ್ತಿಗೆ ತೋರಿದಂತಾಗುತ್ತದೆ. ಗೀತೆಯ ಮತವೂ ಇದೇ. 'ಮಹಾಭಾರತಕಾರ'ನೂ ಅವಶಿಷ್ಟ ಮುಷ್ಟಿತ ಪರಿಮಿ ವೀರರ ನಾಶವನ್ನೇ ಚಿತ್ರಿಸಿದ್ದಾನೆ!

ನಾವಿಂದು ವೈವಾಹಿ ಶುಭ-ಉಪಯೋಗವನ್ನು ಅನುಭವಿಸುತ್ತಿರುವಾಗ, ಅವನ್ನೇ ನಮ್ಮ ಗುರಿಯಾಗಿಟ್ಟುಕೊಂಡು 'ಸಂತಾನೋತ್ಪಾದನ'ವನ್ನು ವಿವಾಹದ ಸ್ವಭಾವವೆಂದೇ ಏಕೆ ತಿಳಿಯಬಾರದು? ನನಗೆ ಇದೇ ಇಷ್ಟವೆಂದು ತೋರುವುದು. ನಾವು 'ಸೇವಾಯೋಗ'ದ ಪ್ರತಿಜ್ಞೆಯನ್ನು ಮಾಡಿ ಆಚರಿಸೋಣ! ಭೋಗವನ್ನು ಪ್ರಕೃತಿನಿಯಮಬದ್ಧರಾಗಿ ಅನುಭವಿಸೋಣ!

ನಾನಿನ್ನು ವಿಧಿಯ ಅರ್ಥವನ್ನು ನೋಡುವೆನು. ಸಂಕುಚಿತವಾದರೂ ಸತ್ಯವಾದ ಅರ್ಥವನ್ನು ಮುಳುಗಿಸುವುದು ನನಗೆ ಸಮ್ಮತವಿಲ್ಲ. ಆದರೆ, ಪರಸ್ಪರ ಸಂಬಂಧ-ಪ್ರಸಂಗಗಳನ್ನು ನೋಡಿ, ಉತ್ಪನ್ನವಾಗುವಂತಿದ್ದರೆ,—

ಮೂಲವನ್ನು ವ್ಯತ್ಯಾಸಗೊಳಿಸದೆ ಹೊಸಅರ್ಥವನ್ನು ಕಲ್ಪಿಸುವ ಅಧಿಕಾರವು ನಮಗೆ ಇದ್ದೇ ಇದೆ. ಇದೇನೂ ಧರ್ಮಬಾಹಿರವಲ್ಲ ಮಾತ್ರವಲ್ಲ, ಧರ್ಮ ಸಮ್ಮತವು! ಕಲ್ಪನೆಯಲ್ಲೂ ಇರದ ಅರ್ಥಗಳು ಹೊಸಹೊಸದಾಗಿ ಕಾಲಕ್ಕನುಸರಿಸಿ ಉಂಟಾಗುತ್ತಲೇ ಇರುವುವು. ಲೋಕೋನ್ನತಿಯೊಡನೆ ಅದರ ವಾಹನ-ಸಾಧನಗಳ ಉನ್ನತಿಯೂ ಆಗುವುದು. ಅದರ ಪಾರಸ್ಪರಿಕ ಸಂಬಂಧದ ಮುಖ್ಯ ಸಾಧನವು ಭಾಷೆಯು! ಇದರ ವಿಕಾಸವು ೨ ರೀತಿಯಿಂದಲೂ ಆದೀತು. ಒಂದು, ಹೊಸ ಶಬ್ದ ಮತ್ತು ವಾಕ್ಯಗಳ ರಚನೆಯ ಮೂಲಕ, ಇನ್ನೊಂದು ಅದೇ ಶಬ್ದಗಳ ಹೊಸ ಅರ್ಥದ ಮೂಲಕ. ಯಾವ ಸಮಯದಲ್ಲಿ ಯಾವ ಅರ್ಥವು ಉಚಿತ ಮತ್ತು ಅನುಕರಣೀಯವೆಂಬುದನ್ನು ನಿರ್ಧರಿಸುವುದು ತತ್ಕಾಲೀನ ಜನತೆಯ ವಿವೇಕವನ್ನು ಅವಲಂಬಿಸಿಯದೆ. ಇದಕ್ಕೆ ಯಾವ ನಿರ್ದಿಷ್ಟ ಸಿದ್ಧಾಂತವೂ ಇಲ್ಲ. ವಿವೇಕವನ್ನು ಬಿಡದೆ ಮಾಡಿದ ಅರ್ಥವು ಶೋಭಾಸ್ಪದವಾದೀತು. ಸತ್ಯದಲ್ಲಿ ಲೇಶದಷ್ಟು ಕುಂದಾಗದಿರುವುದೇ ಇದರ ಮರ್ಯಾದೆ.

ಈಗ 'ಸಪ್ತಪದಿ'ಯ ಸಂಶೋಧನವನ್ನೆಲ್ಲಿ ಮಾಡಬೇಕೆಂಬುದನ್ನು ವಿವರಿಸಬೇಕಾಗಿಲ್ಲ. ಮೇಲೆ ವಿವರಿಸಿದ ಚರ್ಚಾಸ್ಪದ ವಿಷಯಗಳೆರಡರಿಂದಲೇ ಅದೂ ಸ್ಪಷ್ಟವಾಗುವುದು. ನಂತರ ವಿಧಿಯ ನಿರ್ಣಯ ಮಾಡುವುದು ಕಷ್ಟವಾದ್ದಲ್ಲ.

ಗೋ:—ತಾವು ವಿವಾಹವನ್ನು ಅವಿಚ್ಛೇದ್ಯ ಧರ್ಮಸಂಬಂಧವೆಂದು ತಿಳಿಯುತ್ತೀರೋ? ಯಾ ಸಾವಧಿಕ ಶರೀರಸಂಬಂಧವೆಂದು?

ಮೋ:—ವಿವಾಹವು ಶರೀರಸಂಬಂಧವಲ್ಲ. ಅದು ಆತ್ಮದ್ವಯದ ಅಭಿನ್ನ ಸಂಬಂಧವು. ಇದರ ವಿಚ್ಛೇದವಾಗದು. ವಿಚ್ಛೇದ ವಿಧಿಯೂ ಇದಕ್ಕಿಲ್ಲ. ಮರಣಾನಂತರವೂ ಸಂಬಂಧವು ಪೂರ್ವದಂತೆಯೇ ಇರುವುದು. ಆತ್ಮಗಳ ವಾಸ್ತವಿಕ ಐಕ್ಯಸ್ಥಾಪನೆಯಿರುವಾಗ ಪುನರ್ವಿವಾಹದ ಪ್ರಶ್ನೆಯೇ ಇಲ್ಲ. ಅಂತಹ ಪುನರ್ವಿವಾಹವು ಅನುಚಿತವು!

ಗೋ:—ಹಾಗಾದರೆ, ಬಾಲವಿಧವೆಯರ ಗತಿಯೇನು? ವಿಧವೆಗಳ ವರ್ತಮಾನ ವಿಪತ್ತನ್ನು ದೂರಮಾಡಲು ಪುನರ್ವಿವಾಹದ ಹೊರತು

ಉಪಾಯವಿಲ್ಲವೋ? ಪುನರ್ವಿವಾಹದ ಔಚಿತ್ಯವಾದರೂ ಎಂತು? ಇನ್ನು ವಿಧವಾ—ವಿಧುರರ ವಿವಾಹಗಳನ್ನಾರಂಭಿಸಿದರೆ, ಜಾತಿಗತ ಪರ್ಯಾಪ್ತ ಸ್ತ್ರೀ—ಸಂಖ್ಯೆಯಾದರೂ ಇದೆಯೇ? ಜಾತಿರಕ್ಷಣದ ಉಪಾಯವಾದರೂ ಯಾವುದು?

ಮೋ:—'ವಿಧವಾ ವಿವಾಹದಿಂದ ಸತೀತ್ವ ನಾಶವಾಗುತ್ತದೆ'ನ್ನುವುದುಂಟು ನಮ್ಮ ವೈದೀಕರು! ಆದರೆ, ಇದು ಭ್ರಮಜನ್ಯವು! ಪುನರ್ಲಗ್ನವಾಗುವ ಇಚ್ಛೆಯುಳ್ಳ ವಿಧವೆಯನ್ನು ಬಲಾತ್ಕರಿಸಿ ಅವಿವಾಹಿತೆಯನ್ನಾಗಿಟ್ಟರೆ ಸತೀತ್ವನಾಶವು ಸಮೀಪಗೊಳ್ಳುವುದು. ಬಾಲವಿಧವಾ-ವಿವಾಹವೇ ಸತೀತ್ವವನ್ನು ಕಾಪಾಡಬಲ್ಲುದು. ಬಾಲವಿಧವೆಗಳ ವಿವಾಹವನ್ನು ಮಾಡುವುದರಿಂದ, ವಿವಾಹ ಸ್ವಾತಂತ್ರ್ಯವನ್ನು ಕೊಡುವುದರಿಂದಲೇ, ಬ್ರಹ್ಮಚರ್ಯೆಗೆ ಉಳಿಗಾಲವುಂಟು. ಇಂದು ಶಾರೀರಕ ಮತ್ತು ಮಾನಸಿಕ ವ್ಯಭಿಚಾರವು ಎಲ್ಲೆ ದಾಟಿದೆ. ವಿಧವೆಗಳ ಮೇಲಾಗುವ ಅನಾಚಾರವೇ ಇದರ ಕಾರಣ. ಸ್ತ್ರೀ—ಪುರುಷರ ಸಂಖ್ಯಾವಿಚಾರದಲ್ಲಿರುವ ನಿನ್ನ ತಿಳುವಳಿಕೆಯು ಸರಿಯಾದ್ದಲ್ಲ. ಜಾತಿರಕ್ಷಣೆಯ ಉದ್ದೇಶದಿಂದ ನಿನ್ನ ಸಂಖ್ಯಾವಿಷಯಕ ಶಂಕೆಯುಂಟಾಗಿರುವುದಾದರೆ, ಅಂತಹ ಜಾತಿವೈವಿಧ್ಯವೂ ಬೇಡ. ಚತುರ್ವರ್ಣಗಳಿಗಿಂತ ಹೆಚ್ಚಿನ ಜಾತಿಭೇದಗಳಿಗೆ ಎಂತಹ ಶಾಸ್ತ್ರದಲ್ಲೂ ಪ್ರಮಾಣವಿಲ್ಲ. ಯುಗಧರ್ಮಕ್ಕನುಸರಿಸಿ ಈ ಜಾತಿಗಳ ಅನೇಕತ್ವವುಂಟಾಗಿರಬಹುದು. ಅಂದು ಇದರ ಅಗತ್ಯವೂ ಇದ್ದಿರಬಹುದು. ಆದರೆ, ಇಂದು ಇದರ ಅಗತ್ಯವಾಗಲಿ, ಉಪಯೋಗವಾಗಲಿ ಇರುವುದಿಲ್ಲ.

ಗೋ:—ಈಗಣ ನನ್ನ ಸಂದೇಹವು ಬೆಟ್ಟಕ್ಕಿಂತಲೂ ದೊಡ್ಡದಾಗಿದೆ. ವಿವಾಹದ ಅವಿಚ್ಛೇದ್ಯತೆಯ ಕುರಿತಾದ ತಮ್ಮ ಪ್ರತಿಪಾದನವೆಲ್ಲಿ? ಈ ಬಾಲವಿಧವಾ ವಿವಾಹದ ಸಮರ್ಥನವೆಲ್ಲಿ! ಇದರೊಳಗಿನ ಪರಸ್ಪರ ವಿರೋಧವು ಆಶ್ಚರ್ಯಕರವಾಗಿದೆ. ಇದರ ಸಮಾಧಾನವಾದರೂ ಏನು?

ಮೋ:—ನನ್ನೆರಡು ಮಾತುಗಳಲ್ಲಿ ವಿರೋಧದ ಬದಲು ನನಗೇನೋ ಪರಸ್ಪರ ಸಮರ್ಥನವೇ ಕಂಡುಬರುವುದು. ಯಾರಾದರೂ ತಂದೆ-ತಾಯಿಗಳು ಅಜ್ಞ ಮತ್ತು ಅಬೋಧ ಬಾಲಿಕೆಯನ್ನು ಸ್ವಾರ್ಥ ಯಾ ಅಜ್ಞಾನವಶ

ರಾಗಿ, ಯಾರಾದರೊಬ್ಬನಿಗೆ ಕನ್ಯೆಯ ಹಿತಾಹಿತಗಳನ್ನೆಣಿಸದೆ, ಪರಸ್ಪರ ಸಮ್ಮತಿಯನ್ನೂ ಆಶಿಸದೆ ಒಪ್ಪಿಸಿದರೆ, ಅದು ವೈವಾಹಿಕ ಸಂಬಂಧವೆಂದೆಣಿಸಲಾಗುವುದಿಲ್ಲ. ಈ ಸಂಬಂಧವನ್ನು 'ಆತ್ಮಿಕಸಂಬಂಧ'ವೆನ್ನಲೂ ಆಗುವುದಿಲ್ಲ. ಶರೀರ ಸಂಬಂಧದ ಗಂಧವೂ ಇದರಲ್ಲಿಲ್ಲ! ಹೀಗಿರುತ್ತ ಇಂತಹ ಕನ್ಯೆಯ ವಿವಾಹವನ್ನು ಪುನಃ ಮಾಡಿದರೆ, ಅದು ಪುನರ್ವಿವಾಹವಲ್ಲ. ಅಜ್ಞಾನಾವಸ್ಥೆಯಲ್ಲಾದ ಈ ಮಾಂತ್ರಿಕ ಅಲ್ಲ! ಸ್ವಾರ್ಥವಿವಾಹವು 'ವಿವಾಹ'ವೇ ಅಲ್ಲ! ಆದುದರಿಂದ ಇಂತಹ ಕನ್ನಿಕೆಯ 'ನಾಮಧಾರೀ' ಪತಿಯ ಮರಣಾನಂತರವಾಗಲಿ, ಯಾ ಜೀವನದಲ್ಲೇ ಆಗಲಿ, ಯೋಗ್ಯವರನೊಡನೆ ವಿವಾಹಮಾಡಬೇಕಾದುದು ಮಾತಾ-ಪಿತೃಗಳ ಕರ್ತವ್ಯವು! ಮಾಡಿಕೊಳ್ಳುವುದು ಆರ್ಯವಧುವಿನ ಆದ್ಯಕರ್ತವ್ಯವು.

ಗೋ:—ಇದೀಗ ತಿಳಿಯಿತು ವೈವಾಹಿಕ ರಹಸ್ಯ! ಇಂದು ಹಿಂದೂ ಸಮಾಜದಲ್ಲಿ, ಸುಶಿಕ್ಷಿತ ಹಿಂದೂ ಕುಟುಂಬಗಳಲ್ಲಿ ಸ್ತ್ರೀಯರು ಅನುಭವಿಸುತ್ತಿರುವ ಅನಾದರವು ಕನಿಕರವನ್ನುಂಟುಮಾಡುತ್ತಲಿದೆ. ಸ್ತ್ರೀಯು ಪುರುಷನ ಸ್ವಾರ್ಜಿತ (ಹಿರಿಯರು ಮಾಡಿಸಿದ ವಿವಾಹವೇ ಇರಲಿ!) ಸೊತ್ತೆಂಬ ಭಾವನೆಯು ಅಂಟಿಕೊಂಡಿದೆ. ಇದು ಉಚಿತವೋ?

ಮೋ:—ಸ್ತ್ರೀ--ದೂಷಕ ಪ್ರವೃತ್ತಿ ಸಮರ್ಥನಕ್ಕಾಗಿ ಪುರುಷವರ್ಗವು ಸ್ವರ್ಗೀಯ ಮಹಾನ್ ವ್ಯಕ್ತಿಗಳನ್ನೂ ಅಪಮಾನಪಡಿಸುತ್ತಲಿದೆ. ಪುರುಷರ ಸ್ವಾಧಿಕಾರಲಾಲಸೆಯು ಲಜ್ಜಾಜನಕವಾಗಿದೆ. ಪತ್ನಿಯನ್ನು 'ದಾಸಿ'ಯೆಂದು ತಿಳಿಯುವುದು ಮಹಾಪರಾಧವು. ಪತಿಯು ಪತ್ನಿಯನ್ನು ಸ್ವಸಹಧರ್ಮಿಣಿಯೆಂದು ತಿಳಿಯಬೇಕು! ಪತ್ನಿಯ ದುಃಖವೆಂದೂ ಪತಿಯ ಸುಖವಾಗದು. ಪತಿಗಿರುವಷ್ಟೇ ಸ್ವಾತಂತ್ರ್ಯವು ಪತ್ನಿಗಿರಬೇಕು. ಸ್ತ್ರೀದೂಷಕ ಸಭ್ಯತೆಯು 'ಸಭ್ಯತೆ'ಯಲ್ಲ. ಅದರ ನಾಶವು ಅವಶ್ಯಂಭಾವಿಯು! ಸಂಸಾರ ಚಕ್ರವು ಕೇವಲ ಪುರುಷಾಧೀನವಾಗಿಯೇ ಇಲ್ಲವು! ಸ್ತ್ರೀ-ಪುರುಷರ ಸಂಯುಕ್ತ ಶಕ್ತಿಯಲ್ಲೇ ಸಂಸಾರದ ಅಸ್ತಿತ್ವವಿದೆ.

ಹಿಂದೂ ಸಭ್ಯತೆಯಲ್ಲಿ ಸ್ತ್ರೀಮಹತ್ವವು ಪ್ರಾಚೀನ ಕಾಲದಿಂದಲೂ ವಿಶೇಷವಿದೆ. ಪ್ರಾಚೀನ ಕಾಲದಲ್ಲಿ ಸ್ತ್ರೀನಾಮವೇ ಪುರುಷನ ಹೆಸರಿಗಿಂತ

ಮೊದಲಿರುತ್ತಿತ್ತು. 'ಸೀತಾ-ರಾಮ' 'ಲಕ್ಷ್ಮೀ-ನಾರಾಯಣ' 'ಪಾರ್ವತಿ-ಪರಮೇಶ್ವರ'ರೆನ್ನುತ್ತಿದ್ದರಲ್ಲದೆ 'ನಾರಾಯಣ-ಲಕ್ಷ್ಮಿ'ಯೆನ್ನುತ್ತಿದ್ದಿಲ್ಲ, ಎನ್ನುತ್ತಲೂ ಇಲ್ಲ. ಇಂತಹ ಉನ್ನತ ಸಭ್ಯತೆಯಲ್ಲಿ ಪತ್ನಿಯ ಅನಾದರ ಮಾಡುವುದು ತಪ್ಪು!

ಗೋ:—ಇಂದು ಗಂಡ-ಹೆಂಡರಿಗೆ ವ್ಯಾಜ್ಯವುಂಟಾದರೆ, ಹೋದರು ಮುನ್ಸೀಫ್ ಕೋರ್ಟಿಗೆ! ಅಶನಾರ್ಥ ವಸೂಲಿಗೆ! ಸ್ವಲ್ಪ ಸಾಧನೆ ಸರಿಯಾದರೆ ಏನಾದರೂ ಸಿಗುತ್ತದೆ. ಇಲ್ಲದಿದ್ದರೆ ಅಥವಾ ಕೋರ್ಟಿಗೆ ಹೋಗದೇ ಇದ್ದರೆ, ಇವಳಿಗೆ ಸಿಗುವುದು ಸೊನ್ನೆ! ಇಷ್ಟು ಕಾಲ ಅತ್ತೆಮನೆಯಲ್ಲಿ ಪಾತ್ರ ತಿಕ್ಕಿದ್ದೇ ಬಂತು! ಇನ್ನು ಎಷ್ಟೋ ಶ್ರೀಮಂತ ಕುಲದ ಸ್ತ್ರೀಯರು, ದಾಯಾದಿಗಳ ಹಂಚಿಕೆಗಳಿಂದ ಹೊಟೆಲ್‌ಗಳಲ್ಲಿ ರೊಟ್ಟಿ ಮಾಡಲು ಯಾ ಊರೂರು ಭಿಕ್ಷೆ ಬೇಡಲು ಹೋಗಬೇಕಾಗುತ್ತದೆ. ತಮ್ಮ ಮತದನುಸಾರವಾಗಿ, ಪತ್ನಿಗೆ ಪತಿಯ ಧನದ ಮೇಲೆ ಅಧಿಕಾರ ವುಂಟೋ? ಅವಳ ಭಾಗ್ಯವೆಷ್ಟು?

ಮೋ:—ಇದರ ಕುರಿತಾಗಿ ನನ್ನಭಿಪ್ರಾಯವೇನೂ ಭಿನ್ನವಾಗಿಲ್ಲ. ಆದರೆ, ಹೇಳಿದುದರಿಂದೇನು? ನಮ್ಮ ಸರಕಾರವುಂಟೋ? ನಮ್ಮ ಅಧಿಕಾರ ವುಂಟೋ? ಪತ್ನಿಯು ಪತಿಯ ಸೊತ್ತಿನ ಸಮಾನಾಧಿಕಾರಿಣಿಯು! ಪತ್ನಿಯು ಪತಿಸಂಪತ್ತಿನ ಅವಿಭಾಜ್ಯ ಅಧಿಕಾರಿಣಿಯು.

ಗೋ:—ಸ್ತ್ರೀಯನ್ನು 'ಅಬಲೆ'ಯೆಂದಿರುವರು ನಮ್ಮ ಪೂರ್ವಜರು. ಸ್ತ್ರೀಗೆ ಸ್ವಾತಂತ್ರ್ಯವಿಲ್ಲವೆಂದಿರುವನು ಮನುಮಹಾರಾಜನು! ಇದರ ತಥ್ಯವೇನು? ಕಾರಣವೇನು?

ಮೋ: – ಸ್ತ್ರೀಯನ್ನು 'ಅಬಲೆ'ಯೆಂದುದು ಕೃತಯುಗದಲ್ಲೂ ಅಲ್ಲ! ಕಲಿಯುಗದಲ್ಲೂ ಅಲ್ಲ! ಮಧ್ಯ ಕಾಲದಲ್ಲಿ!! ಶಾಸ್ತ್ರದ ಕಾಲದಲ್ಲಲ್ಲ! ಶಸ್ತ್ರಕಾಲದಲ್ಲಿ!!

ಆಗ ಸ್ತ್ರೀಯ ಕಾರ್ಯಕ್ಷೇತ್ರವು ಮನೆ ಹೊಸ್ತಿಲಿನೊಳಗೇ ಇತ್ತು. ಪುರುಷನೇ ಸ್ತ್ರೀಯನ್ನು ಕಾಪಾಡಬೇಕೆಂಬುದು ಶಾಸ್ತ್ರದ ಅಪ್ಪಣೆಯಿತ್ತು! ಆದರೆ, ಇಂದು ಶಾಸ್ತ್ರ-ಶಸ್ತ್ರಗಳ ಪ್ರಾಚೀನತೆಯ ಕಾರಣ ಅವುಗಳ

ಪ್ರಾಶಸ್ತ್ಯವು ಕಮ್ಮಿಯಾಗಿದೆ! ಇಂದಿರುವುದು ಅಹಿಂಸೆಯ ಪ್ರಾಶಸ್ತ್ಯ. ಅಹಿಂಸೆಯ ವಾತಾವರಣದಲ್ಲಿ ಸ್ತ್ರೀಜಾತಿಯ ಕಾರ್ಯಕ್ಷೇತ್ರವು ಕೇವಲ ಮನೆಯ ಹೊಸ್ತಿಲೊಳಗೆ ಮಾತ್ರ ಆಗಿರದೆ, ವಿಶಾಲವಾಗಿದೆ. ಅವರಲ್ಲಿನ ಮುಂಚಿನ ಆತ್ಮಿಕ ದೌರ್ಬಲ್ಯವು ಆತ್ಮಜಾಗೃತಿಯಲ್ಲಿ ಪರಿವರ್ತಿತವಾಗಿದೆ! ಸಮಾಜ ರಾಷ್ಟ್ರಹಿತದ ಕಾರ್ಯಗಳನ್ನು ಕೈಗೊಳ್ಳಲು ಅವಕಾಶವೊದಗಿದೆ. ಸಮಾಜದ ಪಥಪ್ರದರ್ಶನತನವನ್ನು ನೆರವೇರಿಸುವ ಯೋಗ್ಯತೆಯು ಸದ್ಯೋಜಾಗೃತ ಸ್ತ್ರೀ-ಜಾತಿಯಲ್ಲಿ ಇಲ್ಲವಾದರೂ, ಭವಿಷ್ಯವು ಅವರ ಕೈಯಲ್ಲಿದೆಯೆಂಬುದನ್ನು ಮರೆಯಬಾರದು!

ಗೋ:—ತಾವೀಗ ಅಹಿಂಸೆಯ ಮಹತ್ವವನ್ನು ಉಲ್ಲೇಖಿಸಿದಿರಿ. ನಿಮ್ಮ ಅಹಿಂಸಾ ತತ್ವವನ್ನು ಕೇಳಿರುವೆನು. ಆದರೆ, ಅದು ಜೈನರ ಅಹಿಂಸೆಯೂ ಅಲ್ಲ, ಸನಾತನ ಧರ್ಮದಲ್ಲಿರುವ ಅಹಿಂಸಾ ತತ್ವವೂ ಅಲ್ಲ. ಅದರ ಯಥಾರ್ಥ ಸ್ವರೂಪವನ್ನು ತಿಳಿಯಲಾಶಿಸುವೆನು.

ಮೋ:—ಅಹಿಂಸಾತತ್ವದ ಜನಕನೇನೂ ನಾನಲ್ಲ! ಆದರೆ, ಅನುಯಾಯಿಯು ಅಹುದು. ಎಷ್ಟೋ ಜನರು ತಮ್ಮನ್ನು ತಾವೇ 'ಅಹಿಂಸೆಯ ಪೂಜಾರಿ'ಗಳೆನ್ನುವರು. ಆದರೆ ಅಹಿಂಸೆಯ ಅರ್ಥವು ಅವರಿಗೆ ಗೊತ್ತಿರುವುದಿಲ್ಲ.

'ಅಹಿಂಸೆ'ಯ ಅರ್ಥವು ನಾನು ಅರಿತಿರುವಂತೆ 'ಮನ, ವಚನ, ಮತ್ತು ಕರ್ಮದಿಂದ ಯಾರನ್ನೂ, ಯಾರ ಹೃದಯವನ್ನೂ, ಪೀಡಿಸಬಾರದು.' ಆದರೂ ಇದೇ ಅಹಿಂಸೆಯ ಪೂರ್ಣ ವ್ಯಾಖ್ಯೆಯಲ್ಲ! ಅಹಿಂಸೆಯ ಅನುಯಾಯಿಯು ಸ್ವತಃ ಅಹಿಂಸಕನಾಗಿದ್ದರೆ ಮಾತ್ರ ಕೆಲಸವಾಗದು. ಹಿಂಸಾಮಯ ವಾತಾವರಣವನ್ನೇ ಶುದ್ಧಿಗೊಳಿಸುವುದೂ ಅವನ ಧರ್ಮವು! ಹಿಂಸಕನೊಡನೆ ಸಹಾಯಕನಾಗಿದ್ದರೆ ಮಾತ್ರವಲ್ಲ ಅವನು ಏನು ಮಾಡಿದರೆ ನನಗೇನು? ಎಂದು ಉದಾಸೀನನಾಗಿದ್ದರೂ ಹಿಂಸೆಯ ದೋಷಕ್ಕೆ ಪಾತ್ರನಾಗಬೇಕಾಗುತ್ತಾನೆ. ಅಂತೂ ತಾನಿರುವ ವಾತಾವರಣದಲ್ಲಿಯೂ ಹಿಂಸೆಗೆಡೆಕೊಡದಿರುವುದೇ ಅಹಿಂಸಾವ್ರತದ ಸ್ವರೂಪವು!

ಭಾರತವರ್ಷದಲ್ಲಿಂದು ಹಲವು ವಾಗ್ಮಿಗಳು ಅಹಿಂಸಾತತ್ವದ ಕುರಿತು ಭಾಷಣಗಳನ್ನು ಕೊಡುವರು. ಆದರೆ, ಇಂದು ತಮ್ಮ ದೇಶದ ಬಡವರ

ಮೇಲಾಗುವ, ಇಂಗ್ಲಿಷ್‌ಶಾಹಿಯಿಂದ ಪ್ರಜೆಗಳ ಮೇಲಾಗುವ ಹಿಂಸೆಯನ್ನು-ಅನ್ಯಾಯವನ್ನು ಕೊನೆಗಾಣಿಸಲು ಪ್ರಯತ್ನಿಸುವವರೆಷ್ಟು ಮಂದಿ ಇರುವರು? ಈ ಹಿಂಸೆಯ ದೋಷಿಗಳು ಯಾರು? ಸುಮ್ಮನೆ ಕೈಕಟ್ಟಿ ಕೂತಿರುವವರು! ಬಲಿವೇದಿಯಿಂದ ಭಾರತವನ್ನು ಬೆಳಗಿಸದವರು!

ಖಾದಿಯ ಪ್ರಚಾರವು ಅಹಿಂಸೆಯ ಪೋಷಕವು! ಅಹಿಂಸಾತತ್ವದ ಪ್ರಯೋಗವನ್ನು ಮಾಡಲು ಸಾತ್ವಿಕ ಮತ್ತು ಐಕ್ಯಮಯ ವಾತಾವರಣವಿರಬೇಕು. ಖಾದೀ ಪ್ರಚಾರವು ಅಹಿಂಸೆಯನ್ನು ಸಫಲಗೊಳಿಸಬಲ್ಲದು. ಅಹಿಂಸೆಯ ವ್ಯಾಖ್ಯೆಯು ಇನ್ನೂ ವಿಸ್ತೃತವಾಗುವುದು. ಮೂಗಿನೊಳಗೆ ಕ್ರಿಮಿಗಳು ಹೊಕ್ಕಿ ನಾಶಗೊಳ್ಳುವುದೆಂದು ನಂಬಿ ಮೂಗಿಗೊಂದು ಬಟ್ಟೆಯನ್ನು ಕಟ್ಟಿಕೊಳ್ಳುವ ಅಹಿಂಸೆಯ ವ್ರತವು ಇಲ್ಲಿ ಬೇಕಿಲ್ಲ! ಹಿಂಸೆಯ ಪ್ರತಿಮೂರ್ತಿಯಂತಿರುವ ಧಾರ್ಮಿಕ ಯಾ ರಾಜನೈತಿಕ ಶಾಸನವನ್ನೇ ಹಿಂದೂಸ್ಥಾನದಿಂದ ಮಾತ್ರವಲ್ಲ ವಿಶ್ವದಿಂದ ಹೊರಡಿಸುವುದೇ, ಶಾಂತಿ ಸಹಿಷ್ಣುತೆಗಳಿಂದ ಮುಂದುವರಿಯುವುದೇ, ಅಹಿಂಸೆಯು! ಅಹಿಂಸೆಯನ್ನು ಬಲಾತ್ಕರಿಸಿ ಆಚರಿಸುವಂತೆ ಇತರರನ್ನು ನಿರ್ಬಂಧಿಸುವುದು ಸಾಧ್ಯವಿಲ್ಲ. ಅದನ್ನು ಮಾನವನು ಸ್ವಕರ್ತವ್ಯವೆಂದು ತಿಳಿಯಬೇಕು. ವಿಧಾತನು ನಿಶ್ಚಯವಾಗಿಯೂ ಪ್ರಾಣಿಮಾತ್ರದ ಹಿತವನ್ನು ಬಯಸುತ್ತಾನೆ. ಪ್ರತಿಯೊಂದು ಚರಾಚರ ವಸ್ತುವಿನ ಹಿತಾಕಾಂಕ್ಷೆಯೇ ಅಹಿಂಸೆಯು!

ಗೋ:—ತಾವೀಗ ಉಲ್ಲೇಖಿಸಿದ ಖಾದಿಯ ಮಹತ್ವವನ್ನು ನಾನು ಬಲ್ಲೆ. ಆದರೆ, ಪೋಷಾಕಿನ ದೃಷ್ಟಿಯಿಂದಾಗಲಿ, ಆರ್ಥಿಕ ಲಾಭದ ದೃಷ್ಟಿಯಿಂದಾಗಲಿ ಅದರ ಮಹತ್ವವು ಯಾವುದು? ಪೋಷಾಕು ಯಾವದಿದ್ದರೇನು? ಅಂತಃಕರಣದ ಪರಿವರ್ತನವೇ ಮುಖ್ಯವಲ್ಲದೆ ಹೊರಗಿನ ಉಡುಪಿನಿಂದ ಆಗುವುದಾದರೂ ಏನು? ಇನ್ನು ಖಾದಿಯಿಂದಾಗುವ ಆರ್ಥಿಕ ಲಾಭವಾದರೂ ಯಾವುದು?

ಮೋ:—ಬಾಹ್ಯಾಚರಣದ ಪ್ರಭಾವವು ಅಂತಃಕರಣದ ಮೇಲೆ ಬಿಂಬಿಸುವುದಿಲ್ಲವೆನ್ನುವುದು ಹೇಗೆ? 24 ತಾಸುಗಳ ತನಕವೂ ನಿರಂತರವಾಗಿ ಶರೀರಕ್ಕಂಟಿಕೊಂಡಿರುವ ಖಾದಿಯಾದರೂ ದೇಶಪ್ರೇಮವನ್ನುಂಟುಮಾಡ

ಬಾರದೆನ್ನುವುದು ಹೇಗೆ? ಶಬ್ದಶಕ್ತಿಗಿಂತ ಕ್ರಿಯಾಶಕ್ತಿಯು ಉಚ್ಚತರವು. ಇನ್ನು ಆರ್ಥಿಕವಿಚಾರ. ರೂಪಾಯಿಯ ಬೆಲೆಯು ದ್ವಿವಿಧವಾಗಿರುತ್ತ ದೆಂಬುದನ್ನು ನೀನೂ ಅರಿತಿರಬಹುದು. ವ್ಯಯಕ್ಕನುಸರಿಸಿ ಅದರ ಬೆಲೆಯು ಯೋಗ್ಯತೆಯನ್ನು ನಿರ್ಣಯಿಸುವರು. ರೂಪಾಯಿ ಕೊಟ್ಟು ಒಂದು ಆಯುಧವನ್ನು ಪಡೆದು ಒಬ್ಬನ ಹತ್ಯೆ ಮಾಡಿದರೆ, ಆ ಆಯುಧ ಮತ್ತು ಯಜಮಾನನು ರಕ್ತರಂಜಿತನಾಗುವಂತೆಯೇ ಆ ರೂಪಾಯಿಯ ಯೋಗ್ಯತೆಯೂ ಆ ಯಜಮಾನನನ್ನು ನರಕಕ್ಕೆಳೆಯುವುದು. ಇದೊಂದು ರೀತಿಯ ಬೆಲೆ. ಇನ್ನೊಂದು, ಒಂದು ರೂಪಾಯಿಗೆ ಸಿಗುವ ಆಹಾರದಿಂದ ನೂರಾರು ಹೊಟ್ಟೆಗಿಲ್ಲದವರನ್ನು ಉಣ್ಣಿಸಿದರೆ, ಅದರ ಬೆಲೆಯು ಯಜಮಾನನನ್ನು ಸ್ವರ್ಗಕ್ಕೇರಿಸುವುದು! ಇದೇ ದ್ವೈವಿಧ್ಯವು. ಎರಡನೇ ಉದಾಹರಣೆಯಲ್ಲಿಯೇ ಖಾದಿಯೂ ಸೇರುವುದು. ಖಾದಿಗೆ ಕೊಟ್ಟ ಒಂದು ರೂಪಾಯಿಯ ವ್ಯಯವನ್ನು ನೋಡು.

ಹತ್ತಿಯ ಹೊಲದವನಿಗೆ	0—3—9
ಶುದ್ಧ ಮಾಡುವವನಿಗೆ	0—0—6
....	0—1—9
ನೂಲುವವನಿಗೆ	0—3—9
ನೇಯುವವನಿಗೆ	0—4—9
ಅಗಸನಿಗೆ	0—0—6
ವ್ಯಾಪಾರಿಗೆ	0—1—0
	1—0—0

ಈ ರೀತಿಯಲ್ಲಿ ಖಾದಿಗಾಗಿ ಖರ್ಚಾಗುವ ಪೈ-ಪೈಯು ದೇಶದ ಬಡಜನರಿಗೆ, ಉದ್ಯೋಗ ಸಿಗದೆ ನರಳುವ ಭಾರತೀಯರಿಗೆ, ಜೀವನೋಪಯೋಗಿಯಾಗುವುದು.

ಇದೇ ರೂಪಾಯಿಯನ್ನು ವಿದೇಶೀ ಬಟ್ಟೆಗೆ ಉಪಯೋಗಿಸಿದರೆ, ವ್ಯಾಪಾರಿಯ ಲಾಭ 0—1—0ಯನ್ನು ಬಿಟ್ಟು 0—15—0ಯನ್ನು ವಿದೇಶಕ್ಕೆ, ಭಾರತದ ದುಡ್ಡನ್ನು ಹಾಳುಮಾಡುವ ಯುರೋಪಿಗೆ, ಸೇರು

ವುದು. ಇದರಿಂದಾಗುವುದೇನು? ಒಂದು ರೂಪಾಯಿ ಕೊಟ್ಟು ಒಂದು ಆಣೆ ಗಳಿಸುವುದು ಆರ್ಥಿಕಲಾಭವೇನು? ಯಾ ರೂ. 1—0—0ನ್ನು ರಾಷ್ಟ್ರದಲ್ಲೇ ಉಳಿಸಿಕೊಂಡು ದುಡಿಯುವುದು ರಾಷ್ಟ್ರಲಾಭವಲ್ಲವೇನು? ಹತ್ತಿಯಾದರೂ ಭಾರತದೇಶದ್ದಾಗಿದ್ದರೆ, 0—3—3ಯು ಭಾರತೀಯ ಒಕ್ಕಲಿಗನಿಗೆ ಸಿಗುವುದು. ಅದೂ ಸಟ್ಟೆಬಾಜ ವ್ಯಾಪಾರಿಗಳ ಜುಗಾರಾಟ ದಲ್ಲೇ ಕೊನೆಗೊಳ್ಳುತ್ತದೆಂದು ನಾನು ಪ್ರತ್ಯೇಕ ಹೇಳಬೇಕಾಗಿಲ್ಲ.

ನಮ್ಮ ದೇಶದ ನಿವಾಸಿಕರು, ಈ ರಾಷ್ಟ್ರೀಯ ಗಣಿತವನ್ನಾದರೂ ಕಲಿಯುವುದೆಂದು? ಪರದೇಶೀಯ ಬಹಿಷ್ಕಾರದಲ್ಲಿ ಯಶಸ್ವಿತೆಯನ್ನು ಗಳಿಸು ವುದಾದರೂ ಹೇಗೆ? ತಿಳಿಯುವುದಿಲ್ಲ.

ಗೋ:—ಪರದೇಶೀಯ ಬಹಿಷ್ಕಾರವೇನೋ ಭರದಿಂದ ಸಾಗುತ್ತಲಿದೆ. ಕಲಕತ್ತೆಯಲ್ಲೇ ಸಿಗರೇಟು, ವಿಸ್ಕಿಗಳಿಗೆ ಲೋಪ ಬಂದು ಅಭಾವವಾಗಿದೆ ಯಂತೆ! ಇದರ ಫಲವಾಗಿ ಇಂದು 'ದೇಶೀ ಸಿಗರೇಟು'ಗಳು, 'ಶಿವಾಜಿ ಬೀಡಿಗಳು' ಉಂಟಾಗಿವೆಯಲ್ಲ? ಇಂತಹ ಅಲ್ಪ ಪದಾರ್ಥಗಳಿಗೆ ಪೂಜ್ಯ ವ್ಯಕ್ತಿಗಳ ಹೆಸರು ಕೊಟ್ಟು ಪಾಪ ಕಟ್ಟಿಕೊಳ್ಳುವುದೊಂದು, ಬಡಜನರನ್ನು ತಪ್ಪುದಾರಿಗೊಯ್ಯುವ ದೇಶದ್ರೋಹವಿನ್ನೊಂದು! ಇಂತಹ ದುಷ್ಪವರ್ತನ ಗಳನ್ನು ತಡಿಯುವುದೆಂತು?

ವೋ:—ವಿಲಾಯತೀ ಎಸಿಡನ್ನು ಕುಡಿದರೂ ಪ್ರಾಣ ಹೋಗುತ್ತದೆ, ಭಾರತೀಯ ಶಂಖಪಾಷಾಣ ತಿಂದರೂ ಪ್ರಾಣವುಳಿಯುವಂತಿಲ್ಲ! ಎನ್ನು ವಾಗ ಇಂತಹ ವ್ಯಾಪಾರ ಮಾಡುವ ಸ್ವಾರ್ಥಿಗಳನ್ನು ತಡೆಗಟ್ಟುವ ಉಪಾ ಯವು ಸರಕಾರದ ಅಪ್ಪಣೆಯಿಂದಾಗದು. ಶಾಂತಿಮಯವಾದ ಸದ್ಬೋ ಧನೆಯಿಂದ ನಮ್ಮ ಸಾಮಾಜಿಕ-ರಾಜಕೀಯ ದೌರ್ಬಲ್ಯದ ಅರಿವನ್ನು ಅವರಿಗೆ ಅರುಹುವುದರಿಂದ, ಶಿಕ್ಷಣವನ್ನು ಅಭಿವೃದ್ಧಿಗೊಳಿಸುವುದರಿಂದ, ಮನೋನಿಯಮದ ಪಾಠವನ್ನು ಕಲಿಸುವುದರಿಂದ. ಇದೇ ಇದರ ರಾಮ ಬಾಣವು!

ಗೋ:—ತಾವನ್ನುವ ಶಿಕ್ಷಣದ ಸ್ವರೂಪವಾದರೂ ಯಾವುದು? ಅಕ್ಷರಜ್ಞಾನ ಮಾತ್ರವೋ? ಇನ್ನು, ಮನೋ-ನಿಯಮನದ ಉತ್ತಮ

ಾರ್ಗವು ಯಾವುದು? ನಾವು ಕೆಲವು ಮಿತ್ರರೊಂದು ದಿನ ವಾದಿಸಿ ಮನೋ ರುಮದ ಉತ್ತಮ ಮಾರ್ಗಗಳು ಉಪವಾಸ ಅಥವಾ ಸತ್ಯಾಚರಣ ುದು ನಿರ್ಣಯಿಸಿದೆವು. ಆದರೆ, ಇವುಗಳಲ್ಲಾವುದು ಶ್ರೇಷ್ಠವೆಂಬು ನ್ನು ತಿಳಿಯದಾದೆವು. ಇದರ ವಿಚಾರವಾಗಿ ತಮ್ಮ ಮತವೇನು?

ಮೋ:—ಶಿಕ್ಷಣವೆಂದರೆ ಅಕ್ಷರಜ್ಞಾನ ಮಾತ್ರವೇ ಅಲ್ಲ. ಬಾಲ್ಯ ಲ್ಲಿ ತನ್ನ ಜ್ಞಾನೇಂದ್ರಿಯ ಮತ್ತು ಕರ್ಮೇಂದ್ರಿಯಗಳ ಮೇಲೆ ನಿಯಮ ನ್ನಿಟ್ಟು ಸದುಪಯೋಗಪಡಿಸುವುದನ್ನು ಅಭ್ಯಾಸಿಸಿ, ಮುಂದೆ ಆ ಅಭ್ಯಾ ದ ಬೆಳವಣಿಗೆಯೇ ಶಿಕ್ಷಣದ ಸ್ವರೂಪವು.

ನೀವು ಮಿತ್ರರು ಕೂಡಿ ಮಾಡಿದ ವಾದವು ಉಪಯೋಗಿಯು ನಿಜ! ದರೆ, ಅದರಲ್ಲಿ ಆತ್ಮನಿರೀಕ್ಷಣದ ಗಂಧವೂ ಇಲ್ಲ. ಉಪವಾಸದಲ್ಲಿ ನೋನಿಯಮನವನ್ನು ಸಾಧಿಸುವ ಯಾವ ಶಕ್ತಿಯೂ ಇಲ್ಲ. ಎಷ್ಟೋ ರಿ, ಉಪವಾಸಿಯ ಮನೋವೃತ್ತಿಯು ಮಲಿನವಾಗುವುದುಂಟು. ದ್ವಾದ ಯ ಪಾರಣವಾಗುವ ತನಕ ಏಕಾದಶೀ ಮಹೋಪವಾಸಿಗಳ ಬಳಿ ಸುಳಿ ಯುವುದೂ ಕಷ್ಟವಾಗುವುದು! ಉಪವಾಸದಲ್ಲಿ ಮನೋನಿಯಮನದ ಶಕ್ತಿ ರುತ್ತಿದ್ದರೆ, ಈ ಗೋಳಾಟವೇಕಿತ್ತು? ಲಕ್ಷಾಂತರ ಜನರು ಹೊಟ್ಟೆ ಲ್ಲದ ಕಾರಣ ದುರ್ವೃತ್ತರೇಕಾಗಬೇಕಿತ್ತು? ಬುಭುಕ್ಷಿತ ಭಾರತದ ಕಲ್ಯಾ ವು ಎಂದೋ ಆಗಿರುತ್ತಿತ್ತು. ಆದರೆ ಇಷ್ಟೊಂದು ನಿಜವೆನ್ನಬಹುದು. ನೋನಿಯಮನದ ಇಚ್ಛೆಯುಳ್ಳವನಿಗೆ ಉಪವಾಸದಿಂದ ಯತ್ಕಿಂಚಿತ್ ಹಾಯ ಒದಗಬಹುದು. ಆದರೆ, ಸತ್ಯಾಚರಣವೇ ಮನೋನಿಯಮ ದ ಸರ್ವೋಪರಿ ಸಾಧನವು. ಇದರಲ್ಲಿ ಮನೋನಿಯಮನದ ಅಪಾರ ಕ್ತಿಯಿದೆ. ಆದುದರಿಂದ ಸತ್ಯಾಚರಣದೊಡನೆ ಉಪವಾಸವನ್ನು ಸರಿ ಟ್ಟುವುದು ಅಯುಕ್ತವಾದುದು. ಸತ್ಯಾಚರಣವಿಲ್ಲದೆ ಮನೋನಿಯಮ ವು ಅಸಂಭವವು!

ಗೋ:—ಪೂಜ್ಯಗುರುಜೀ, ನಾನು ಬಹಳ ಹೊತ್ತಿನಿಂದ ತಮ್ಮನ್ನು ಮಿಸುತ್ತಲಿದ್ದೇನೆ. ಇನ್ನು 'ವರ್ಣಧರ್ಮ' ಮತ್ತು 'ಶ್ರಮಧರ್ಮ'ದ ರಿತು ಕೆಲವು ಪ್ರಶ್ನೆಗಳನ್ನು ಕೇಳಿ ಇಂದು ಸಾಕುಮಾಡಬಯಸುವೆನು.

ತಾವು ಮಹಾತ್ಮ ಟಾಲ್‌ಸ್ಟಾಯರವರಿಂದ ಉಕ್ತವಾದ ಶ್ರಮಧರ್ಮ ವನ್ನು ಒಪ್ಪುವಿರೋ?

ಮೋ:—ಅವಶ್ಯವಾಗಿಯೂ ಒಪ್ಪುತ್ತೇನೆ.

ಗೋ:—ಪ್ರತಿಯೊಬ್ಬ ಮನುಷ್ಯನೂ ತನ್ನ ಕೆಲಸವನ್ನು ತಾನೇ ಮಾಡ ಬೇಕೆಂಬುದು ತಮ್ಮ ಸಿದ್ಧಾಂತವೋ?

ಮೋ:—ಇದನ್ನು ನಾನು ಬಯಸುವುದೂ ಇಲ್ಲ; ಸಾಧ್ಯವೆಂದು ತಿಳಿಯುವುದೂ ಇಲ್ಲ. ಟಾಲ್‌ಸ್ಟಾಯರು ಇದನ್ನು ಅಗತ್ಯವೆಂದು ಹೇಳಿಯೂ ಇಲ್ಲ. ಮನುಷ್ಯನು ಎಷ್ಟು ಸ್ವಾಧೀನನೋ ಅಷ್ಟೇ ಪರಾ ಧೀನನು! ಸಮಾಜದಲ್ಲಿರುವ ತನಕ ಅವನ ಸ್ವಾಧೀನತೆಯು ಸಮಾಜ ನಿಯಮಗಳಿಂದ ಮರ್ಯಾದಿತವಾಗಿರುತ್ತದೆ. ಆದುದರಿಂದ ಪ್ರತಿಯೊ ರ್ವನೂ ಯಥಾ ಪ್ರಸಂಗವಾಗಿ ಸ್ವಾವಲಂಬಿಯಾಗಿರಬೇಕು! ನೀರು ಕುಡಿ ಯುವ ಲೋಟಾವನ್ನು ನಾನು ತಂದುಕೊಂಡೇನು. ಆದರೆ, ನನಗೆ ಬೇಕಾ ಗುವ ನೀರನ್ನು ನಾನೇ ಬಾವಿ ತೋಡಿ ಹೊಂದುವುದು ಅಸಾಧ್ಯವು. ನೀರಿನ ಲೋಟಾವನ್ನು ತಾರದಿರುವುದರಲ್ಲಿ ಅಹಂಕಾರವಿದೆ. ಬಾವಿ ತೋಡುವ ವಿಚಾರದ ಆರಂಭದಲ್ಲೇ ಮೂರ್ಖತನವಿದೆ! ಆದುದರಿಂದ ಸ್ವಕಾರ್ಯ ವನ್ನಾದರೂ, ವಿವೇಕಪೂರ್ವಕ ಯೋಚಿಸಿ ಮಾಡಬೇಕು.

ಗೋ:—ಪ್ರತಿಯೊಬ್ಬನೂ ತನ್ನ ಆ ಜೀವಿಕೆಯನ್ನು ಸ್ವಾರ್ಜಿತವಾ ಗಿಯೇ ಮಾಡಬೇಕೆಂದು ತಮಗೆ ಸಮ್ಮತವೋ?

ಮೋ:—ಅವಶ್ಯ; ಹೀಗೆ ಮಾಡದಿರುವುದರಿಂದಲೇ, ಮುಖ್ಯತಃ ಭಾರತವರ್ಷದಲ್ಲಿ ದಾರಿದ್ರ್ಯವು ಬೆಳೆದಿದೆ. ಅನಾರೋಗ್ಯವು ಹೆಚ್ಚಿದೆ. ಧನಾರ್ಜನೆಯ ಲೋಭವು ಮಿತಿಮೀರಿದೆ. ಎಲ್ಲರೂ ತಮ್ಮ ತಮ್ಮ ಜೀವನ ಯಾತ್ರೆಯನ್ನು ತಾವೇ ದುಡಿದು ನಡಿಸಿದರೆ, ಈ ದಾರಿದ್ರ್ಯವೂ ಇರದು. ರೋಗಬಾಧೆಗಳೂ ತಲೆದೋರವು. ಇದರಿಂದ ಉಚ್ಚ-ನೀಚ, ಧನಿಕ–ನಿರ್ಧ ನಿಕರೆಂಬ ಭಾವನೆಯು ನಿರ್ನಾಮವಾದೀತು.

ಗೋ:—'ವರ್ಣಧರ್ಮ' ಮತ್ತು 'ಶ್ರಮಧರ್ಮ'ಗಳಲ್ಲಿ ಶ್ರೇಷ್ಠ ತರವು ಯಾವುದು? 'ವರ್ಣ–ಆಶ್ರಮ' ಧರ್ಮದಲ್ಲಿರುವ ಶ್ರಮವಿಭಾಗವು ಮಾನವವಿಕಾಸಕ್ಕೆ ಪರ್ಯಾಪ್ತವಾಗಿಲ್ಲವೋ?

ನೋ:—'ವರ್ಣಧರ್ಮ' ಮತ್ತು 'ಶ್ರ್ರರು ಬಡಗೀ ಕೆಲಸವನ್ನು
ರ್ಮವು ಪರಸ್ಪರ ವಿರೋಧಿಯೆಂಬಂತೆ ಈ ಧರ್ಮದ ತುಷ್ಟಿಯಾಗದು.
ುದೆ. ವಸ್ತುತಃ ಹೀಗಿಲ್ಲ. ಅವೆರಡೂ ಪರಸ್ಪರ
ರ್ಮ'ವು ಸಾಮಾಜಿಕವಾದುದು. 'ಶ್ರಮಧ ಹಾಸದ ವಿಸ್ಮೃತಿಯಿದೆ.
ದೇ ಭೇದ. ಯಾವ ಸಾಮಾಜಿಕ ಧರ್ಮವೂ ಆ ಜೀವಿಕೆಯ ಸಾಧನ
ಂದ ರಹಿತವಾಗಿಲ್ಲ. ಶ್ರಮಧರ್ಮರಹಿತರಾಗಿರ ಪ್ರಾಪ್ತಿಯು ಮೊದಲು
ೀನರು' ಮಾತ್ರ. ಇದರ ಉದಾಹರಣೆಯು ನಮ್ಮ ರೆ ಇಷ್ಟನ್ನು ನಾನು
ಾಸ್ತ್ರದಲ್ಲಿ ಹೇರಳವಾಗಿದೆ. ವರ್ಣಧರ್ಮದಲ್ಲಿ ಪ್ರತಿಯೊ ನ್ನು ಸಾಗಿಸುತ್ತಿರ
ವಶ್ಯಕರ್ತವ್ಯವೆಂದು ಸಮಾಜಹಿತಕ್ಕಾಗಿ ವಿಹಿತವಾಗಿ ಕ್ಕಾನ್ನ ಭೋಜನ
ಜೀವನವು ನಡಿಯಲಿ, ನಡಿಯದಿರಲಿ, ವರ್ಣಧರ್ಮವನ್ನು ರ್ಾಪ್ತವಾದ
ೇಕಿತ್ತು! ಈಗಲಾದರೂ ಪ್ರಶ್ನೆಯ ಸಮಾಧಾನವಾಗಲಿಲ್ಲವೆನ್ನುಳಿದವರು
ಶ್ರಮಧರ್ಮ'ಗಳು ಸಹವರ್ತಿಗಳಾಗಿದ್ದು ಮಾನವಸಮಾಜದ ಉ ುಂಟು!
ಸಹಾಯಕ ಮತ್ತು ಆದರ್ಶಧರ್ಮಗಳಿವು. ಯು

ಗೋ:—ಚತುರ್ವರ್ಣವಿಹಿತ ಗುಣಗಳೆಲ್ಲವೂ ಒಂದೇ ವ್ಯಕ್ತಿಯಲ್ಲಿ
ಕೂಡಿದ್ದರೆ ಉತ್ತಮವೇ ಸರಿ. ಆದರೆ, ಹೀಗೆ ಅಧಿಕಾಂಶ ಸಮಾಜವು ಆಗ
ಲು ಸಾಧ್ಯವಿದೆಯೋ? ಸಮಾಜದ ಮುಂದಿಡಲು ಈ ಆದರ್ಶವು ಉಚಿ
ತವೋ?

ನೋ:—ನಿರ್ದಿಷ್ಟ ಗುಣ-ಕರ್ಮಗಳು ಆಯಾಯ ವರ್ಣಗಳಿಗೆ
ಸಮಾನವೇ ಆಗಿವೆ, ಮತ್ತು ಆಗಿರಬೇಕು. ಆದರೆ, ಎಲ್ಲರ ಗುಣಕರ್ಮ
ಗಳೂ ಒಬ್ಬನಲ್ಲೇ ಯಾ ಎಲ್ಲರಲ್ಲಿಯೂ ಮೂಡಿ ಬರುವುದು ಅನಾವಶ್ಯಕ
ುತ್ತು ಅಸಂಭವವು.

ಗೋ:—ಟಾಲ್‌ಸ್ಟಾಯರವರು ಹೇಳಿದ ಶ್ರಮಧರ್ಮವು ಸರ್ವ
ಮಾನ್ಯ ಮತ್ತು ಸರ್ವಾಚರಿತವಾದರೆ 'ಈಶ್ವರನೇ ಎಲ್ಲವನ್ನೂ ನೋಡು
ವನು. ಮಾಡುವನು! ಉಣಿಸುವನು! ಅಳಿಸುವನು! ನಗಿಸುವನು! ನಮ
ಗೇನೂ ಅದರಲ್ಲಿ ಸಂಬಂಧವಿಲ್ಲ. ರಾಮ! ರಾಮ!' ಎನ್ನುವುದೇ ನಮ್ಮ
ಕೆಲಸವೆನ್ನುವ ಕಬೀರದಾಸರಂತಹವರಿಗೂ, ಪುಷ್ಪದಂತೆ ಸಪ್ರತೀಕ್ಷ ಭಾವನೆ

ತಾವು ಮಹಾತ್ಮ ಟಾಲ ಣೀಭಿಲಾಷೆಯುಳ್ಳ ರವೀಂದ್ರರಂತಹರಿಗೆ ಈ ವನ್ನು ಒಪ್ಪುವಿರೋ? ಕೆಲಸವು ಯಾವುದು? ಇದೊಂದು ಪ್ರಪಂಚಕ್ಕೇ

ನೋ:—ಅವಶ್ಯವಾಗಿ 'ಜಗತ್ಶಾಂತಿ'ಗೆ ಕಾರಣವಾಗದೇ?

ಗೋ:—ಪ್ರತಿಯೊಂದು ಧರ್ಮ'ವು ಕಬೀರ-ರವೀಂದ್ರರ ಸಿದ್ಧಾಂತಗಳನ್ನು ಬೇಕೆಂಬುದು ತಮ್ಮ ಸಿಲು ಅವರ ಕಾವ್ಯಮಯ ಶಕ್ತಿಯನ್ನು ಪುಷ್ಟೀಕರಿ

ನೋ:—ಇದರ್ಶವು ಬೌದ್ಧಿಕಶಕ್ತಿಯನ್ನು ಕುಗ್ಗಿಸುವುದಿಲ್ಲ. ಬೆಳೆ ತಿಳಿಯುವುದೂ ಇಧರ್ಮದ ಉಪಾಸಕನು ಎಂದೂ ಕಾವ್ಯರಚನೆಯಿಂದಲೇ ಹೇಳಿಯೂ ಇಲ್ಲ. ಸಂಪಾದಿಸನು. ಶ್ರಮವನ್ನು ಬಿಡನು! ಕಬೀರದಾಸರು ಧೀನನು! ಸಮ್ಮಾ-ದೂ ಬಿಟ್ಟಿರಲಿಲ್ಲ. ತಮ್ಮ ಭಜನೆಗಳಿಂದ ಒಂದು ನಿಯಮಗಳಿಂ ಪಾದಿಸುತ್ತಿರಲಿಲ್ಲ. ನೇಯ್ಗೆಯಿಂದ ಸಿಕ್ಕಿದ್ದೇ ಅವರ ಜೀವನ ರ್ವನೂ ೧' ಮಾರ್ಗವಾಗಿತ್ತು!

ಯುವ ಧರ್ಮಪ್ರಚಾರವು ಅವರ ಸ್ವಭಾವವಾಗಿದ್ದು ಸಮಾಜದ ಏಳಿಗೆಗಾಗಿಯೇ ಅದನ್ನು ಕೈಕೊಂಡಿದ್ದರು. ರವೀಂದ್ರರು ವರ್ತಮಾನ ಯುಗದ ಕವಿ ಶ್ರೇಷ್ಠರು. ಕಾವ್ಯರಚನೆಯನ್ನವರು ಸ್ವಜೀವನ ನಿರ್ವಾಹಕ್ಕಾಗಿ ರಚಿಸುವುದಿಲ್ಲ. ಕಾವ್ಯರಚನೆಯಿಂದ ಸಿಗುವ ದ್ರವ್ಯವನ್ನು ಅವರು ತಮ್ಮ ಶಾಂತಿನಿಕೇತನಕ್ಕೀಯುವರು! ಸ್ವಂತ ಆಸ್ತಿಯಿಂದಲೇ ಅವರು ತಮ್ಮ ಜೀವನ ಯಾತ್ರೆಯನ್ನು ನಡೆಸುವರು. ಅವರ ಅಭಿಪ್ರಾಯವು ಶ್ರಮಧರ್ಮದ ವಿಷಯದಲ್ಲಿ ಎಷ್ಟು ಉಚ್ಚವಿದೆಯೆಂಬುದನ್ನು ನಾನರಿತಿರುವುದಿಲ್ಲ. ಆದರೆ, ಅವರೆಂದೂ ಶ್ರಮಧರ್ಮದ ನಿಂದಕರಲ್ಲ. ನಮ್ಮ ಪೂರ್ವಜ ಮಹಾಕವಿಗಳಾಗಲಿ, ಮಹಾಪುರುಷರಾಗಲಿ ಶ್ರಮಧರ್ಮವನ್ನು ತ್ಯಜಿಸಿರಲಿಲ್ಲ! ಬಾದಶಹ ಔರಂಗಜೇಬನು ಟೋಪಿ ಹೊಲಿದು ಜೀವನ ನಡೆಸುತ್ತಿದ್ದನಂತೆ! ಪ್ರಾಚೀನ ಮಹರ್ಷಿಗಳೂ 'ಕೃಷಿ'ಯನ್ನು ಬಿಟ್ಟಿರಲಿಲ್ಲ!

ಗೋ:—ಶ್ರಮಧರ್ಮದನುಸಾರವಾಗಿ, ಮಹಾತ್ಮ ಬುದ್ಧ, ಭಗವಾನ್ ಏಸುಕ್ರಿಸ್ತ, ಸ್ವಯಂ ಟಾಲ್ಸ್ಟಾಯರೂ ನಿರ್ದೋಷಿಗಳಲ್ಲ. ಟಾಲ್ಸ್ಟಾಯರ ಪತ್ನಿಯೇ ಇವರನ್ನು ಕುರಿತು 'ಪುಸ್ತಕಗಳನ್ನು ಬರೆಯುವುದಲ್ಲದೆ ಬೇರೆನೂ ಇವರಿಂದಾಗದು' ಎಂದಿರುವಳು. ಲೋಕೋಪದೇಶಕ್ಕಾಗಿ

ಯೂ ಲೋಕಾಪಹಾಸಕ್ಕಾಗಿ ಟಾಲ್ಸ್ಟಾಯರು ಬಡಗೀ ಕೆಲಸವನ್ನು ಕಲಿತಿರಬಹುದು. ಆದರೆ, ಇದರಿಂದ ಶ್ರಮಧರ್ಮದ ತುಷ್ಟಿಯಾಗದು. ಈ ಪ್ರಶ್ನೆಯ ಇತ್ಯರ್ಥವೇನು?

ನೋ:—ನಿನ್ನ ಈ ತಿಳುವಳಿಕೆಯಲ್ಲಿ ಇತಿಹಾಸದ ವಿಸ್ಮೃತಿಯಿದೆ. ಟಾಲ್ಸ್ಟಾಯರು ತಮ್ಮ ಬೌದ್ಧಿಕ ಶಕ್ತಿಯನ್ನು ಆ ಜೀವಿಕೆಯ ಸಾಧನವನ್ನಾಗಿ ಮಾಡಿರಲಿಲ್ಲ. ಬುದ್ಧದೇವನು ಜ್ಞಾನಪ್ರಾಪ್ತಿಯ ಮೊದಲು ಎಷ್ಟು ಕಷ್ಟಪಟ್ಟಿದ್ದನೆಂಬುದು ನನಗೆ ಗೊತ್ತಿಲ್ಲ. ಆದರೆ ಇಷ್ಟನ್ನು ನಾನು ಬಲ್ಲೆ. ಅವನು ತನ್ನ ಧರ್ಮಪ್ರಚಾರದಿಂದ ಜೀವನವನ್ನು ಸಾಗಿಸುತ್ತಿರಲಿಲ್ಲ. ಭಿಕ್ಷಾನ್ನವೇ ಅವನ ಆ ಜೀವಿಕೆಯಾಗುತ್ತಿದ್ದಿತ್ತು. ಭಿಕ್ಷಾನ್ನ ಭೋಜನದಿಂದ ಶ್ರಮಧರ್ಮವು ಕೆಡುವುದಿಲ್ಲ. ಪರಿವ್ರಾಜಕರು ಪರ್ಯಾಪ್ತವಾದ ಶ್ರಮವನ್ನು ವಹಿಸದಿದ್ದರೆ ಅವರ ಕೆಲಸವು ಸಾಗದು! ಇನ್ನುಳಿದವರು ಟಾಲ್ಸ್ಟಾಯರು! ಅವರ ಪತ್ನಿಯು ನುಡಿದುದರಲ್ಲಿ ಅರ್ಧ ಸತ್ಯವುಂಟು! ವಿಚಾರಪರಿವರ್ತನವಾದ ನಂತರ ಅವರು ಬರೆದ ಪುಸ್ತಕಗಳ ಆದಾಯದಿಂದ ಅವರೇನನ್ನೂ ಉಪಯೋಗಿಸಿಕೊಂಡಿರುವುದಿಲ್ಲ. ಲಕ್ಷಾಂತರ ರೂಪಾಯಿ ಬೆಲೆಯ ಜಹಾಗಿರಿಯ ಅಧಿಪತಿಯಾಗಿದ್ದರೂ ಮನೆಯೊಳಗೆ ಅತಿಥಿಯಂತಿರುತ್ತಿದ್ದನು. ಜ್ಞಾನಪ್ರಾಪ್ತಿಯ ನಂತರ ದಿನನಿತ್ಯವೂ 8 ತಾಸುಗಳು ಕೂಲಿ ಕೆಲಸಮಾಡುತ್ತಿದ್ದನು! ಹೊಟ್ಟೆ ಪಾಡು ಇದರಿಂದ ನಡೆಯುತ್ತಿತ್ತು! ನುಡಿದದ್ದನ್ನು ಆಚರಿಸದೆ ಅವರೆಂದೂ ಇರುವದಕ್ಕೆ ಪ್ರಯತ್ನಿಸಲಿಲ್ಲ. ಇದೇ ಅವರ ವಿಶೇಷತೆ. ನಾನು ಹೇಳಿದುದರ ಸಾರವಿಷ್ಟೆ. ಪ್ರಾಚೀನರು ಯಾವ ಶ್ರಮಧರ್ಮವನ್ನು ಆಚರಿಸಿದರೋ, ಜಗತ್ತಿನ ಅಧಿಕಾಂಶವು ಇಂದೂ ಪಾಲಿಸುತ್ತಿದೆಯೋ, ಅದೇ ಶ್ರಮಧರ್ಮವನ್ನು ಟಾಲ್ಸ್ಟಾಯರು ಸ್ಪಷ್ಟಪಡಿಸಿದರು! ವಾಸ್ತವವಾಗಿ ಶ್ರಮಧರ್ಮವು ಟಾಲ್ಸ್ಟಾಯರ 'ಕೈಗಾರಿಕೆ'ಯಲ್ಲ. ಅದು ರಷಿಯದ ಮಹಾನ್ ಲೇಖಕ ಬುರನಾಫ್‌ನ ಶೋಧವು! ಟಾಲ್ಸ್ಟಾಯರು ಅದನ್ನೇ ಹಿಡಿದೆತ್ತಿ ಬೆಳಕಿಗೆ ತಂದವರು!

ಗೋ:—'ಹಣ ಮತ್ತು ದಾಸ್ಯ ಇವೆರಡೂ ಒಂದೇ ಪದಾರ್ಥವು. ಇದರ ಉದ್ದೇಶ ಮತ್ತು ಪರಿಣಾಮ ಒಂದೇ ಆಗಿದೆ' ಎಂದು ಹೇಳಿರು

ವರು ಶ್ರಮಧರ್ಮದ ಆಚಾರ್ಯ ಟಾಲ್ಸ್‌ಟಾಯರು! ತಾವು ಈ ಮಾತನ್ನು ಒಪ್ಪುವಿರೋ? ಹಣವೆಂದೂ ನಿರ್ದೋಷವಾದ ವಿನಿಮಯ ಸಾಧನವಾಗದೇ? ಆಗಬಲ್ಲುದಾದರೆ ಹೇಗೆ? ಇಲ್ಲವಾದರೆ ಏಕೆ?

ನೋ:— ಈ ಮಾತನ್ನು ಟಾಲ್ಸ್‌ಟಾಯರಂದಿರುವುದು ನನಗೆ ತಿಳಿಯದು. ದಾಸ್ಯ ಮತ್ತು ಧನ ಇವೆರಡೂ ಪರ್ಯಾಯವಾಚಕ ಸಜಾತೀಯ ಶಬ್ದಗಳಲ್ಲ. ಪರಸ್ಪರ ಪ್ರತಿಸ್ಪರ್ಧೆಯ ಲಕ್ಷಣವೂ ಇವುಗಳಲ್ಲಿಲ್ಲ. ದಾಸ್ಯವು ಮಾನವನ ಅವಸ್ಥಾವಿಶೇಷವು. ಆದರೆ ಅದು ತ್ಯಾಜ್ಯವು. ಧನವು ಪ್ರಪಂಚದೊಳಗಿನ ಆರ್ಥಿಕ ವ್ಯವಹಾರದ ಸಾಧನ ಮಾತ್ರ. ಅದು ಎಷ್ಟು ಸಬಲವಾಗಿದ್ದರೂ ಅದರಿಂದ ಕೆಡುಕಿನಷ್ಟೇ ಒಳಿತಿನ ಸಂಭಾವನೆಯೂ ಇದೆ. ಈ ದೃಷ್ಟಾಂತವು ಇನ್ನೂ ಹಲವು ಜೀವನಸಾಧನಗಳಿಗನ್ವಯಿಸಬಹುದು. ನಾಣ್ಯವಲ್ಲದಿದ್ದರೆ ಇನ್ನೊಂದು ರೂಪದಲ್ಲಿಯಾದರೂ ದುಡ್ಡಿನ ಅಗತ್ಯವು ಇದ್ದೇ ಇರುವುದು. ದಾಸ್ಯದ ಆವಶ್ಯಕತೆಯು ಎಂದೂ ಇರದು. ಇಲ್ಲಿ 'ದುಡ್ಡು' ಶಬ್ದದ ಅರ್ಥವನ್ನು ತಿಳಿಯಬೇಕು. ಧಾನ್ಯವನ್ನು ಕೊಟ್ಟು ದನವನ್ನು ಕೊಂಡುಕೊಂಡರೆ ಅದೇ 'ದುಡ್ಡು' 'ಧನ' 'ಹಣ'. ಈ ರೀತಿಯ ವಿನಿಮಯ ಕ್ರಮವು ಜನಸಾಧಾರಣಕ್ಕೆ ಕಠಿನವಾಗುವುದರಿಂದ ನಿರ್ದಿಷ್ಟರೂಪದಲ್ಲಿ ನಾಣ್ಯ ಯಾ ಕಾಗದದ ತುಂಡುಗಳನ್ನು ವ್ಯವಹರಿಸಲಾಗುತ್ತದೆ. ಈ ರೀತಿಯ ನಾಣ್ಯ ಅಥವಾ ಕಾಗದವೂ ಧನವೇ. ಇದರಲ್ಲೇನೂ ಹಾನಿಯಿಲ್ಲ. ಆದರೆ, ಇಂತಹ ನಾಣ್ಯ-ಕಾಗದ ಯಾ ಧಾನ್ಯವನ್ನು ಆವಶ್ಯಕತೆಗಿಂತಲೂ ಹೆಚ್ಚಾಗಿ ಸಂಗ್ರಹಿಸಿದರ, ಕೆಡುಕುಂಟಾಗುವುದು. ಲೋಕಕ್ಕೂ ಅವನಿಗೂ ತೊಂದರೆಯಾಗುವುದು. ಇದರ ಕಾರಣವು ಹಣದ ಅಪರಾಧವಲ್ಲ. ಹಣಕ್ಕಾಗಿ ಹೆಣವಾಗುವ ಕೃಪಣತೆಯ ದೋಷವು! ದಾಸ್ಯವು ಲೋಭದ ಗುರುತು. ಒಬ್ಬನೇ ಒಬ್ಬ ವ್ಯಕ್ತಿಯನ್ನಾದರೂ ದಾಸ್ಯದಲ್ಲಿಡುವ ಕಾರಣವು ಲೋಭವು! ದೋಷವಿದಯಿದರಿಂದ ಆ ಪಾಪಾತ್ಮನಿಗ. ಹಾಗೆಯೇ ಇನ್ನೊಬ್ಬರನ್ನು ವಂಚಿಸಿ ಇರಲಿ, ವಂಚಿಸದೆ ಇರಲಿ, ಅಗತ್ಯಕ್ಕಿಂತ ಹಚ್ಚಾದ ಹಣ ಸಂಗ್ರಹಿಸುವುದರಲ್ಲಿ ಪಾಪವಿದೆ!

ವರ್ಣಧರ್ಮವನ್ನು ತಿಳಿದು ಶ್ರಮಧರ್ಮವನ್ನಾಚರಿಸುವವನು ಇದಕ್ಕೆ ವಿಪರೀತವಾಗಿ ನಡೆಯಲಾರನು! ಅವನೆಂದೂ ಹಣದಲ್ಲಿ ಲೋಭವಿಡನು.

ಅವನು ಯಾರನ್ನೂ ಎಂದೂ ಇನ್ನೊಬ್ಬನನ್ನು ಯಾ ತನ್ನನ್ನು ದಾಸ್ಯಕ್ಕೆ ಎಳೆಯಲಾರನು. ನನ್ನ ಈ ಸವಿಸ್ತೃತ ಉತ್ತರದಿಂದ ನಿನ್ನ ಸಂದೇಹವು ದೂರವಾಗಿರಬಹುದು. ಶ್ರಮಧರ್ಮವು ಮುಂಚೆ ಇರಲಿಲ್ಲ, ಇದು ಈಗಿನ 'ಸೃಷ್ಟಿ' ಎಂದು ತಿಳಿಯಬೇಡ! ಹಿಂದೆ, ವರ್ಣಧರ್ಮಕ್ಕೆ ಕಟ್ಟುಬಿದ್ದು ಆ ಜೀವಿಕೆಗೆಂತಲ್ಲ, ಕರ್ತವ್ಯವೆಂದು ತಿಳಿದು ಶ್ರಮಿಸಬೇಕಾಗುತಿತ್ತು! ಬ್ರಾಹ್ಮಣವಟುವಾದರೂ ದಕ್ಷಿಣೆಯ ಆಶೆಯಿಂದಲ್ಲ, ಕರ್ತವ್ಯಪಾಲನಕ್ಕಾಗಿ ಸಮಿತ್ಪಾಣಿಯಾಗಿ ಗುರುಸೇವೆಯನ್ನು ಮಾಡುತಿದ್ದನು. ತಿಂಗಳ ಕೊನೆಗೆ ಸಿಗುವ ಸಂಬಳದ ಆಶೆಯಿಂದಲ್ಲ, ಕ್ಷತ್ರಿಯ ಸೈನಿಕನು ಲೋಕರಕ್ಷಣ್ಯ ವನ್ನು ತಪ್ಪದೆ ಮಾಡುತಿದ್ದನು. ವೈಶ್ಯನು ಸ್ವಾರ್ಥದ ಆಶೆಯಿಂದಲ್ಲ, ರಾಷ್ಟ್ರೀಯ ಕರ್ತವ್ಯವೆಂದು ತಿಳಿದು ದೇಶ-ವಿದೇಶಗಳಲ್ಲಿ ವ್ಯಾಪಾರವನ್ನು ಸಾಗಿಸುತಿದ್ದನು. ಶೂದ್ರನು ಕೈಗೊಂಡಿದ್ದ ಸೇವಾಧರ್ಮದ ಮಹತ್ವವನ್ನು ಅರಿಯದವನಾರು? ಈ ವರ್ಣಾಶ್ರಮಧರ್ಮದ ಉತ್ಪತ್ತಿಯು ಅನಾದಿಯಾ ಗಿದೆ. ಇದರಲ್ಲಿ ಉಚ್ಚ-ನೀಚತೆಯನ್ನೆಣಿಸುವ ಕಾರಣವಿಲ್ಲ. ಎಂದು ಪ್ರತಿ ಯೋರ್ವ ಭಾರತೀಯನೂ ಶ್ರಮಧರ್ಮಿಯಾಗುವನೋ, ಅಂದು ಭಾರತದ ದಾರಿದ್ರ್ಯವು ನಷ್ಟವಾಗಿ ಭಾರತಭೂಮಿಯು ಪ್ರಾಚೀನ ವೈಭವವನ್ನು ಗಳಿ ಸಲು ಸಮರ್ಥವಾಗುವುದು!

ಗೋ:—ಗುರುವರ, ನಾನಿಂದು ತಮ್ಮನ್ನು ಬಹಳ ಬಳಲಿಸಿದೆನು. ಇನ್ನು ಹಲವು ವಿಷಯಗಳು ಕೇಳಲುಳಿದಿರುವುವು. ಯಥಾವಕಾಶವಾಗಿ ಇನ್ನೊಮ್ಮೆ ತಿಳಕೊಳ್ಳುವೆನು.

ಮೋ:—ಒಳ್ಳೇಯದು, ಸಾಯಂಕಾಲವಾಗುತ್ತ ಬಂತು. ಸಾಯಂ ವಿಹಾರವನ್ನು ಮುಗಿಸಿ, ಇತರ ಮಿತ್ರಮಂಡಲಿಯೊಡನೆ ಶ್ರೀ ಪರಮಪಿತನ ಪ್ರಾರ್ಥನೆಗೆ ಅನುವಾಗೋಣ.

ವಾಚಕರೇ, '**ಮೋಹನವಾಣಿ**'ಯನ್ನೋದಿ, ತಿಳಿದು, ಅದರ ಮಹತ್ವ ವನ್ನು ಗಮನಿಸಿರಿ. ಇಂದಿನ ಭ್ರಾಂತಧರ್ಮವನ್ನು ಸುಧಾರಿಸಲು ಇಂತಹ 'ವಾಣಿ'ಗಳೆಷ್ಟು ಅಗತ್ಯವಿದೆಯೆಂಬುದನ್ನು ಮನಗಾಣಿರಿ! ಮೋಹನ-ಗೋ ಪಾಲರ ಪರಿಚಯವನ್ನು ವಾಚಕರೇ ಮಾಡಿಕೊಳ್ಳಲಿ.

ಪ್ರತಿಗಳು ದೊರೆಯುವ ಸ್ಥಳ:—

ಎಂ. ಎಸ್. ಭಿಡೆ, ಮುಂಡಾಜೆ,
ದಕ್ಷಿಣ ಕನ್ನಡ.

ಸರಸ್ವತೀ ಪ್ರಿಂಟಿಂಗ್ ವರ್ಕ್ಸ್, ಲಿಮಿಟೆಡ್,
ಕೆಂಟೋನ್ ಮೆಂಟ್ ರಸ್ತೆ,
ಮಂಗಳೂರು, ದ. ಕನ್ನಡ.

ಸರಸ್ವತೀ ಪ್ರಿಂಟಿಂಗ್ ವರ್ಕ್ಸ್, ಲಿಮಿಟೆಡ್, ಮಂಗಳೂರು ಇಲ್ಲಿ ಮುದ್ರಿಸಲ್ಪಟ್ಟು,
ಶ್ರೀ। ಎಮ್. ಎನ್. ಭಿಡೆ, ಮುಂಡಾಜೆ, ಇವರಿಂದ ಪ್ರಕಟಿಸಲ್ಪಟ್ಟಿತು.